January 2010 - Dec - 2010.

COMMUNIQUE

Volume : 21
January-2010
Part 10

Lahari — News letter for private circulation among the legal fraternity — Its Unique!

# GREETINGS OF THE NEW YEAR

## CJK misses the bus again

*impeachment proceeding gets initiated*

*dalits rushes to CJK's rescue*

*Adi Dravidar Christians can not be considered as Schedule Castes in view of Cause 3 of Appendix-I of Constitution (Scheduled Castes) Order, 1950*

J.P.D.Dinakaran (as he then was) in W.P.No.723/1997 2004 (1) CTC 561

Months of uncertainty and speculations in media and legal circle ended with the Central government rejecting the Supreme Court collegium's move to elevate Karnataka High Court Chief Justice P D Dinakaran as a judge of the apex court in the wake of allegations against him.

It has been reported that the Law Ministry has returned the file recommending the elevation to the Chief Justice of India K G Balakrishnan with a request to the collegium to reconsider the recommendation.

Earlier the CJI had written to the Law Ministry seeking to delink the name of Dinakaran from the list of High Court Chief Justices, recommended for elevation to Supreme Court.

On 18th December the proceeding to impeach CJK got officially started with the Rajya Sabha Chairman, Hamid Ansari admitting a notice of the motion by opposition MPs.

Now in the wake of impeachment proceedings, the CJI has said that `the Collegium of SC has kept Justice Dinakaran's name in abeyance'.

Dinakaran is facing allegations of land grabbing in Kaverirajapuram in Tiruvallur district of Tamil Nadu, a charge denied by him.

Law Minister Veerappa Moily, has declined to comment publically on the issue of elevation.

In August this year, the collegium had recommended the name of Dinakaran along with Chief Justices of four other High Courts. While Dinakaran's name was kept on hold, four others were elevated to the Supreme Court recently.

In the meantime, the Judicial Accountability and Judicial Reforms Forum intensified its campaign against Karnataka High Court Chief Justice P D Dinakaran, by enlisting support of political parties to initiate an impeachment move against CJK in the Parliament.

CJK Dinakaran's reaction to these developments appeared in a section of media where he is said to have responded by saying that allegations of land grabbing against him were "baseless and incorrect". On the impeachment motion, he is said to have reacted, "it is an unfortunate situation. Unfortunate not from my point of view, unfortunate for not taking the entire reality and entire facts available on record into consideration."

'Justice Dinakaran is being targeted because he is a dalit.' Praveen Rashtrapal and J D Seelam, Congress MPs in Rajya Sabha

In a related development a section of Dalit's organizations, some of Dalit MPs, Mayavati, CM of Uttar Pradesh, a self proclaimed champion of dalit's cause have rushed to the rescue of the beleaguered Judge on the ground of his cast.

## Hubli hosts lawyers' conference

*boycott mars the function*

The 9th State level Lawyers' Conference jointly hosted by Hubli Bar Association and the Karnataka State Bar Council was held in Gokul Garden, Hubli, on 27th and 28th of December 2009.

The podium of the event was named after Sir Siddhappa Kambli, a lawyer from Hubli of pre independence era and a freedom fighter.

The Chief Minister who was to inaugurate the function did not attend. In his absence, his speech was read over by Minister, Jagadish Shettar.

Speaking on the occasion as the Chief Guest, the Union Law Minister, Veerappa Moily made three important announcements. Firstly, the existing Judges Inquiry Act, 1968 will be scrapped and in its place a new legislation, Judicial Standards and Accountability Act will be brought in. Fast Track Courts would be given additional responsibility in the form assignment of different types of cases. And finally, the Circuit Benches at Dharwad and Gulbarga would be given the status of permanent benches soon.

The two days's event witnessed 4 working sessions apart from inaugural and valedictory functions.

Lawyers of Dharwad bar had boycotted the event, so were the judges.

## SC suffers another set back on right to information

*fiduciary capacity no bar to disclose info*

The tough stand taken by SC that information held by competent authorities in fiduciary capacity can not be divulged, suffered another set back when the a bench of Delhi HC ruled favouring disclosure of such information while disposing of a set of appeals.

The judgment assumes significance in view of the stand taken by the Registry of the Supreme Court that the information held by Chief Justice of India pertaining to the appointment of judges and their assets could not be made public on the ground that he holds such information in fiduciary capacity.

Interpreting various provisions of the Right to Information Act, a bench of Delhi HC has said that "competent authority" has power to make public, information held by them in fiduciary capacity in public interest.

"Under Section 8(1)(e) of the RTI Act, the competent authority is entitled to examine the question whether in view of the larger public interest information protected under the sub-clause should be disclosed... The competent authority can direct disclosure of information, if it comes to the conclusion that larger public interest warrants disclosure," the bench observed.

The competent authority defined in the Act includes the President, the Governor, Chairman and speaker of legislative body, Chief Justice of India, Chief Justices of High Courts.

## Bangalore mediation centre achieves 61% success

*it should not be a ploy to get adjournment*

Speaking in the inaugural function of the conference on 'Alternative Disputes Resolution-Conciliation and Mediation' on Saturday, the 13th of December 2009, CM B.S Yeddyurappa said the mediation centre in Bangalore had achieved 61 per cent success in disposing cases. The state government will give all help to the state judiciary for its work of administration of justice, the CM assured.

This moderate rate of success of the centre which was started with much fanfare is due to the fact that many unscrupulous litigants use it as a ploy to get much wanted long adjournments. And the system has not been designed to check such undesirable practices.

*Judges, like Caesar's wife, should be above suspicion*
*-Charles Bowen*

**Editor Speaks**

## Decide his fate quickly

***delay defeats justice***

***It is commendable that the beleaguered Chief Justice, P.D.Dinakaran has decided to remain absent to judicial junctions. He ought to have taken this wise decision long ago. However, it is a little solace to those who want to seen only untainted personalities in the judiciary. For, he continues to be the Chief of the judiciary in Karnataka. The administration of the state judiciary continues to be in his hands. He wields the power to initiate process for elevations to the bench.***

***Going by the observations made by the CJI, K.G.Balakrishnan, the Chief seems to be waiting for the outcome of the now started impeachment proceedings in the Rajya Sabha. He has not finally dropped the name of Dinakaran from elevation to the apex Court.***

***The legislators on their part are in no hurry to decide this issue which for them is trivial. That apart they are a divided house. There is no unanimity amongst them on such an important issue. Some MPs have already indicated that they would play the Dalit card. Adding to the confusion is the stance adopted by another besieged Judge Soumitra Sen.***

***Hamid Ansari, the Chairman of the Rajya Sabha who ought to have constituted a three member Committee under the Judges Inquiry Act, 1968 by this time has not done so till date this paper went to press.***

***At a time when all efforts are being made for speedy disposal of cases either by regular courts or by mediations, the system is ill afford to have a leader whose fate hangs in balance. Therefore, in the interest of justice and in the interest of the system, the fate of the Chief Justice should be decided quickly. He should either be elevated with a clean chit or be given marching order within the shortest possible time frame. Any extraneous considerations should not be allowed to play a role in it.***

## SC intervenes, surrogate twins get passport

***real question of parentage remains unresolved***

The 22-month-old twins of German parents born in the womb of an Indian woman have finally found their way to home. The citizenship of the twins and their parentage had become a tricky issue.

While the parents of the twins wanted the passports showing their names as father and mother, the passports prepared by Government was showing the Indian woman as their mother.

When the parents approached the Gujarat HC, the Court ruled directing the Ministry of Home Affairs to issue passports to the twins. The Centre took the matter to Sc.

According to the Centre, the passport office was willing to issue travel documents to the twins, but they (German couple) were not prepared to accept it. The boys were born to surrogate mother Martha Khristhi on Jan 4, 2008.

When the controversy was taken upto SC, Advocate Dushyant Dave, appearing for Jan Balaz, a German national, submitted that the passports were ready, and that they should be handed over to the biological parents.

But Additional Solicitor General Harin P Rawal said the passports had been withdrawn as the government could not issue the documents to the children as their parents were Germans.

A bench headed by Justice G S Singhvi asked the Ministry of Home Affairs to issue travel documents to the twins within 48 hours as the Centre had refused to grant them passports.

# Around the Courts

***Sec. 168 – Motor Vehicles Act, 1988 – determination of compensation in case of death – different heads – future prospects – regard should be had to changed societal conditions – higher salaries and perks –so also inflation.***

While determining the amount of compensation payable to the dependents of the deceased person several factors have to be taken into consideration to arrive at the just compensation. In one of its latest decisions, the SC has reiterated that no hard and fast rule can be laid down as to what are the factors that should go into the decision making process.

While determining the loss of future prospects, the SC has held that in the changed societal conditions and global scenario, the educational qualification of the deceased, his past performance in his job, future salary hike, increased perks, etc., should also be taken into consideration. The Court has further held that inflation is another factor which the Court should keep in mind while calculating the just compensation.

***(2009 AIR SCW 6999)***

***Freedom of press/media - sting operations by channels – how far permissible – should the media be reined by legislation ?***

Sting operation by media particularly by TV channels by hiding cameras have come here to stay. There are no laws to govern such operations. There is a growing demand to regulate such operations particularly in the background of the fact that many large business houses own TV channels. They have an inherent dilemma to reconcile their business interests with the higher standards of professionalism/demands of profession. But so far no such move has been made by the legislators.

Such a demand was made before a bench of the SC which was hearing a petition by R.K.Anand who was exposed by NDTV for his obnoxious role in trying to win over witnesses in a hit and run case of high profile. Answering the demand the SC held 'any attempt to control and regulate the media from outside is likely to cause more harm than good. The norms to regulate the media and to raise its professional standards must come from inside'


***(2009 AIR SCW 6879)***

***Sec. 302 – Sec. 304 Part II – Sec. 53 of Indian Penal Code and Sec. 354 of the Criminal Procedure Code – appropriate sentence – what is ?***

Considering a vexed question of law and facts of deciding whether an act of fatal assault would fall within the mischief of Sec. 302 or Sec. 304 part II of IPC, a bench of the SC noticed that in the absence of intention or pre-meditation in the mind of the accused to murder the deceased, the offence would fall under Sec. 304 part II of IPC and not under Sec. 302.

Considering another problematic question of imposing appropriate sentence, the bench observed that imposition of proper and appropriate sentence on accused is bounded obligation and duty of the Court. Endeavor of the Court must be to ensure that the accused receives appropriate sentence. The sentence should be according to the gravity of the offence, neither more nor less.

***(2009 AIR SCW 6710)***




J| Shivarj Patil Speaking on the occassion of P.G.C. Changappa Memorial Lecture organised by Lahari. From Left to Right are Prashanth Chandra, President Lahari Adocate Forum, K. N. Putte Gowda President AAB and Srinivas Murthy Scretary, Lahari Advocate Forum.

# INFORMATION TECHNOLOGY ACT, CYBER CRIMES AND INDIAN PENAL CODE

STUDENTSPEAKS...

Compiled by :
BHAVANA G. K.
III Yr. B.A.,LL.B., Student
Bangalore Institute of Legal Studies
bhavana.kmurthy@gmail.com

***Loopholes in the Information technology Act:-***

This act doesn't deal with cyber squatting i.e., stealing of domain name from its legal owner, controlling the conduct of cyber cafes, net pornography hosted by websites of foreign origin, taxation of e-commerce transactions, spamming or the practice of sending unsolicited commercial e-mails that amounts to breach of individuals right to privacy on the Net; crimes committed by websites of foreign origin; lack of enforceability of the provisions relating to e-governance; jurisdiction in the cyberspace (namely, jurisdiction of courts and jurisdiction of electronic contracts); stamp duty of electronic contracts, cyber stalking, credit card fraud, cyber defamation, Internet hour theft.

***Information Technology***

The rapid development of information technology presents challenges for the law; challenges which are not confined to any single one of the traditional legal categories but which arise in, for example, criminal law, intellectual property law, contract and tort. Even land law may not be untouched. Initially, these challenges manifested themselves at the micro rather than the macro level, with questions such as applicability of copyright protection for computer programmes. More recently, with the accelerating growth of the internet and the worldwide web, some of these problems such as privacy have been excepted, and others including the regulation of offensive material, have come to the fore. In effect, the questions posed before law by the advancing technology are many and various.

***Cyber crime***

"Cyber crime" means any illegal act that involves computer system, computer network. The mens rea means an intent to secure access to any programme or data held in any computer system, computer network, and actus reus means that with that intent the accused intends to secure access unauthorisedly to any particular programme or data held in any particular computer, computer system or computer network

Cyber Contravention- [ Section 43(A) to (H) I.T Act]

43(a) - cracking, computer trespass, privacy violation.

43(b) - digital copying, date and computer database theft, violation of privacy etc.

43(c) - deletion, alteration, damages, modification of stored computer date or computer programmes.

43(e) - denial of service, spamming etc.

43(f) - interference or misuse of computer devices etc.

43(g) - illegal access, misuse of computer devices etc.

43(h) - computer /online fraud, phishing etc.

Cyber Offences- (Section 65-74 I.T Act)

Section 65- Tampering With Computer Source Documents

Section 66- Hacking With Computer System

Section 67- Publishing Of Obscene Information In Electronic Form

Section 71- Misrepresentation

Section 72- Breach Of Confidentiality And Privacy

Section 73- Publishing False Digital Signature Certificate

Section 74- Publication Of Fraudulent Purposes

***Indian Penal Code***

From the point of view of Information Technology Act, sections 167,168,169 and 170 of the Indian Penal Code are important. I.T. Act has amended some sections of Indian Penal Code. Section 167,168,169 & 170 relate to public servants and discharge of public duty. Under amended section 167 of Indian Penal Code, trade includes trade done in all forms through electronic transaction, or e-commerce. For example if a public servant starts consultancy through website and takes payments for the same, he can be punished under the amended Indian Penal Code. Electronic trade may be in goods or services like music, consultancy etc.

Under amended section 169 of the Indian Penal Code, the public servant can be prosecuted and punished if he deals in electronic property such as software e.g. sale, or bidding etc.

Under amended section 170 of the Indian Penal Code, a public servant who has started a website in an unauthorized manner on behalf of some Government investigating agency in a fake way and collect private information from people with malafide motive. This is an act of impersonation by use of Electronic communication.

***Bibliography:***

1. Information technology Law And practice by Dr. Gupta and Agrawal, Premier publishing company, Edition 2009
2. An introduction to cyber crime and cyber law by Dr. R.K. Chaubey, Kamal law house, 2008 edition
3.http://scholar.google.com/scholar?q=cyber+crimes+in+india+and+the+related+laws+ and+judgements&hl=en&um=1&ie=UTF-8&oi=scholart
4. 2003(3) SCC 641
5. http://www.alertindian.com/node/18
6. (2002) 7 Supreme Court Cases 759
7. Supreme Court Millennium Digest
8. Criminal Major Acts, by Padala Rama Reddi and Padala Srinivasa Reddy, Asia Law house, 8th edition

***Criminal liability for misuse of Information Technology under Indian penal code***

section 120A - criminal conspiracy

Section 153A (1) - promoting enmity between different groups

Section 292 - Sale, etc., of obscene books, etc.

Section 295A – Deliberate and malicious acts, intended to outrage religious feelings of any class.

Section 463 – forgery.

Section 416 – cheating by personation.

Section 499 – Defamation.

Section 501 – Printing or engraving matter known to be defamatory.

Section 503 – Criminal Intimidation.

Section 505(1), (2) – statements conducing to public mischief.

Section 509 – word, gesture or act intended to insult the modesty of a woman.

***Cyber Crime Convictions & Judgments***

(2002)7 SCC 759

(Before N. Santosh Hegde and B.P. Singh, JJ.)

Dr. Prakash .... Petitioner; Versus State of T.N and others.... Respondents

Writ petition (Crl.) No 66 of 2002 decided on October 4, 2002

preventive detention- grounds of detention- Significance of letter received from member of public pro bono publico (in the public interest) – Held, may be taken into consideration if such letter is related to the grounds of detention - Contention rejected that police is not entitled to look into any material not collected during the course of its investigation – Where appellant had been served detention order primarily on grounds that he had committed offense under S. 67 of IT act, 2000 and under Ss.4 and 6 of Indecent Representation Of Women ( Prohibition) Act, 1986 and S. 27 of Arms Act 1959 and detaining authority admittedly took note of a letter from women member of public stating that appellant had been involved in heinous crimes, that police should ensure he is punished and not released on bail, held on facts, contents of letter were not extraneous or irrelevant–Appellant's representation was rightly rejected by state Government- Words and Phrases–"pro bono publico"–T.N. Prevention Of Dangerous Activities Of Bootleggers, Drug Offenders, Forest Offenders, Goondas, Immoral Traffic Offenders And Slum Grabbers Act, 1982 [14 of (1982), section3(1)]

Preventive detention- Grounds of detention – Extraneous material- Effective representation- Detenu's right to make, held, is not affected in any manner just because a copy of document not actually considered by the detaining authority is included in the documents of the Detenu – Where two letters written by representatives of women's organizations, inter alia, threatening a "Dharna" if appellant Detenu were released on bail were received by detaining authority, Respondent 2, but not relied on by him, where as another from an individual demanding that appellant not be released on bail, was relied on and copies of all three letters were supplied to appellant, held on facts, contents of the letters would not mislead or confuse appellant

Preventive Detention- Grounds of detention- Non communication of – Grounds and other language not known to Detenu- Held on facts delayed of two days in furnishing translated copies had caused no prejudice to Detenu.

Petition dismissed ★

## AIWL Conference

***Ernakulam witnesses Stree Shakti***

All India Women Lawyers' Conference was held in Ernakulam, Kerala on 28th to 30th December 2009. The conference was jointly hosted by All India Federation of Women Lawyers and Kerala Federation of Women Lawyers. As part of the conference seminars were held on Cyber Law and Crimes against Women, Matrimonial Property, Sexual Harassment at Work Place and Gender Justice in Judiciary.

## Nation embarks on e-tracking of crimes

***it would automate the processes of case registration, investigation, arrest and status of trials***

The last session of the Parliament was informed that the Government of India is interconnecting about 14,000 police stations and 6,000 police offices across the country for an IT-enabled sophisticated tracking system in crime investigation and detection of criminals.

The total estimated cost of the nation-wide project, called Crime and Criminal Tracking Network and Systems (CCTNS), is Rs 2,000 crore, Minister of State for Home Affairs Ajay Maken said in the Lok Sabha.

"The major role in the implementation of the project will be with state governments and the Union Territory administrations," Maken said.

He said the role of the central government would be "largely confined to development and management of the Core Application Software and issuing guidelines, review and monitoring of the project implementation".

He said three states — Andhra Pradesh, Karnataka and Gujarat — have developed "somewhat similar platforms" to automate the processes related to case registration, investigation, arrest and status of court trials.

**WORDSPOWER**

## vis major

**Pronunciation:** (VIS MAY-juhr)

**Etymology:** From Latin vis major, literally, greater force. Also see force majeure.

**Meaning:** noun: An unavoidable disruptive event (such as an earthquake) that none of the parties is responsible for, which may exempt them from the obligations of a contract. Natural instances of vis major are also called acts of God.

Under the Indian Contract Act Vis major is a good defence against non performance of the contract. Under Insurance laws vis major is one of the grounds on which compensation may be claimed.

### EVENTS AND HAPPENINGS

- On 03.12.2009 Advocates' day was celebrated jointly by Lahari Advocates Forum and AAB.
- On 04.12.2009 B.N.Bachchegowda, Minster for labour, Government of Karnataka spoke on the subject `Justice, Justice Dispensation and Judiciary' under the auspice of Karnataka Vakeelara Okkoota. The speech was delivered in Senate Hall of Central College, Bangalore.
- Name of the Frazer Town police station has been changed under the order of the City Police Commissioner. Henceforth the police station shall be known as Hoysala Nagara Police Station.
- On 14.12.2009, Shankara Bidari, Commissioner of Police addressed the members of AAB, Magistrate Court Unit.
- On 16.12.2009 a Kannada book authored by S.Sharanappa ( 9343829861) on practice and procedures of cross examination was released in a function organized by AAB in Vakilara Bhavana.

## DoT imposes penalty on telecom operators in J&K

***Airtel, BSNL, Vodafone, Tatas and Ambani in the list of wrong doers***

At a time when security forces in the border State are working hard to check illegal activities of those who sneak into India from across the boarder, telecom operators in Jammu and Kashir circle are floating all norms prescribed by Department of Telecom for verification of connection holders.

73,778 such cases have so far been detected and a hefty fine of Rs 7.38 crore have been slapped against these wrong doers. These include Bharti Airtel, BSNL, Vodafone and the Tatas and the Ambanis.

The highest penalty of Rs 5.33 crore has been slapped on Airtel while the state run telecom major BSNL faces a penalty of Rs 1.48 crore.

The DoT has taken this extreme step to check misuse of telephone in insurgency-hit state as non-verification of subscribers' identity could lead to escalation of illegal activities. The DoT has been issuing notifications from time to time to mobile operators to ensure 100 per cent verification.

*WE, SHIV KUMAR, B.NANDGOPAL & S.N. PRASHANTH CHANDRA HAVE MERGED OUR LEGAL PRACTICE AND SHALL NOW BE KNOWN AS THE LAW FIRM :*

**LAW & OPTIONS**

*with our office at 1-A, 36TH CROSS, 2ND MAIN, JAYANAGAR 8TH BLOCK, BANGALORE 560 082*
*080-22441515*
*lawandoptions@gmail.com*

**SHIV KUMAR**
**B.NANDGOPAL**
**S.N.PRASHANTH CHANDRA**
*Advocates*

**Techy Lawyer** ಟೆಕ್ಕಿ ಲಾಯರ್

Computer Course *(theory and practical)* ***only for beginners***
*For those who already know computers, you may treat this as a refresher course and join*

ಕಂಪ್ಯೂಟರ್ ಕೋರ್ಸ್ ವಕೀಲರಿಗೆ ಮಾತ್ರ

4 Saturdays or 4 Sundays (5 hours every Saturday or Sunday)

**Course fee Rs. 3150/-** only

೪ ಶನಿವಾರದ ದಿನಗಳು ಅಥವಾ ೪ ಭಾನುವಾರದ ದಿನಗಳು
ಕೋರ್ಸ್ ಫೀಸ್ : ರೂ. ೩೧೫೦/- ಮಾತ್ರ

ಸಂಪರ್ಕಿಸಿ : ಮಿಸ್ಟರ್ ಅಯ್ಯರ್ (ಮೊಬೈಲ್ : ೯೭೩೧೦೮೮೯೮೧)

Contact : MR.IYER@IzeeCo (Iyer Zone Consultants)
Mobile : 9731088981

***3rd batch launching on 9th January***

**Published by** : Lahari Advocates Forum, No. 2980, "Laxmideep", 17th Cross, K.R. Road, BSK II Stage, Bangalore-560 070
**Printed at** : Vee Kay Printers & Publishers, # 396, Ooliga Complex, Sampige Road, Malleshwaram, Bangalore-560 003.
**Editor : Aravind. M. Neglur.**

# ಲಹರಿ ಸಂವಾದ

ಸಂಪುಟ - ೯ | ಶ್ರೀ ವಿರೋಧಿ ಸಂವತ್ಸರ ಪುಷ್ಯ - ಮಾಘ | ಸಂಚಿಕೆ - ೧೦


## ಓದುಗರಿಗೆ ಹೊಸ ವರ್ಷದ ಶುಭಾಶಯಗಳು

ಒಳಗೇನಿದೆ?


ಪುಟ ೧ : ಉಪ್ಪಿನಕಾಯಿ, ತಿಂಗಳ ಸುದ್ದಿ, ವಿದೇಶದ ಸುದ್ದಿ
ಪುಟ ೨ : ಪ್ರಚಲಿತ, ನ್ಯಾಯಾಲಯಗಳ ಅಂಗಳದಿಂದ
ಪುಟ ೩ : ವಿಶೇಷ ಲೇಖನ ಮಾಲೆ, ಸುದ್ದಿ
ಪುಟ ೪ : ಪುಸ್ತಕ ಪರಿಚಯ, ಫೋಟೋ, ಸುದ್ದಿ


ಉಪ್ಪಿನಕಾಯಿ

### ಕಳಂಕಿತರಿಗಿಲ್ಲ ಸ್ಥಾನ: ಮೊಯಿಲಿ

ಯಾರ ಹೆಸರನ್ನು ಹೇಳದೆ 'ಕಳಂಕಿತರಿಗೆ ನ್ಯಾಯಾಂಗದಲ್ಲಿ ಸ್ಥಾನ ಇಲ್ಲ' ಎಂದು ಕೇಂದ್ರ ಕಾನೂನು ಮಂತ್ರಿ ಮೊಯಿಲಿ ಹೇಳಿದ್ದಾರೆ. ಡಿಸೆಂಬರ್ ೧೪ ರಂದು ರಾಜ್ಯ ಸಭೆಯಲ್ಲಿ ಮೊಯಿಲಿ ಈ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆ ನ್ಯಾಯಾಂಗಕ್ಕೆ ಸಂಬಂಧಿಸಿದಂತೆ ಕೇಂದ್ರದ ಸರಕಾರದ ಮುಂದಿನ ನಡೆಗೆ ಮಾರ್ಗಸೂಚಿಯಾಗಿದೆ.

### ಇದು ಹೊಸ ರೀತಿಯ ಪೊಲೀಸ್ ಠಾಣೆ!

ಸಾಮಾನ್ಯ ಪೊಲೀಸ್ ಠಾಣೆಗಳಲ್ಲದೆ ಸಂಚಾರಕ್ಕೆ ಬೇರೆ, ಗಣ್ಯರ ರಕ್ಷಣೆಗೆ ಬೇರೆ, ಸೈಬರ್ ಅಪರಾಧಕ್ಕೆ ಬೇರೆ ಹೀಗೆ ಬೇರೆ ಬೇರೆ ರೀತಿಯ ಪೊಲೀಸ್ ಠಾಣೆಗಳ ನಂತರ ಈಗ ಸರದಿ, ನದಿ ಪೊಲೀಸ್ ಠಾಣೆಗಳದ್ದು! ಅಲ್ಲಲ್ಲ, ಯಾರಾದರೂ ನದಿಗಳನ್ನು ಕದ್ದೊಯ್ದಾರೆಂದು ನದಿ ರಕ್ಷಣೆಗೆ ಈ ಠಾಣೆಗಳನ್ನು ಸ್ಥಾಪಿಸುತ್ತಿಲ್ಲ. ಬದಲಿಗೆ ನದಿತೀರದಲ್ಲಿ ಕಾರ್ಯಾಚರಣೆ ನಡೆಸುವ ಕ್ರಿಮಿನಲ್‌ಗಳನ್ನು ಹದ್ದು ಬಸ್ತಿನಲ್ಲಿಡಲು ಮತ್ತು ನದಿ ಪ್ರವಾಹದಿಂದ ಆಗುವ ಪ್ರಕೋಪದ ಸಮಯದಲ್ಲಿ ಸಾರ್ವಜನಿಕರಿಗೆ ಸಹಾಯ ಮಾಡಲು ಈ ನದಿ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗುತ್ತಿದೆ. ಈ ಸುದ್ದಿ ಬಂದಿರುವುದು ಬಿಹಾರದಿಂದ. ಪಶ್ಚಿಮ ಚಂಪಾರಣ್, ಸುಪೌಲ್, ಪಟ್ನಾ, ನೌಗಾಟಿಯಾ ಮತ್ತು ದರ್ಭಾಂಗ್ ಜಿಲ್ಲೆಗಳಲ್ಲಿ ಈ ಠಾಣೆಗಳನ್ನು ಸ್ಥಾಪಿಸಲಾಗುತ್ತಿದೆ.

### ಇನ್ನೂ ನ್ಯಾಯಾಲಯಗಳು ಬೇಕು.

೧೩ ಡಿಸೆಂಬರ್‌ನಂದು ಬೆಂಗಳೂರಿನಲ್ಲಿ ನಡೆದ ಸಮಾರಂಭವೊಂದರಲ್ಲಿ ಭಾಗವಹಿಸಿದ ಸಿಜೆಐ. ಬಾಲಕೃಷ್ಣನ್ 'ನಮ್ಮಲ್ಲಿರುವ ಮೊಕದ್ದಮೆಗಳ ಸಂಖ್ಯೆಗಳಿಗೆ ಅನುಗುಣವಾಗಿ ೩೫೦೦೦ ಕೆಳ ಹಂತದ ನ್ಯಾಯಾಲಯಗಳು ಬೇಕು. ಆದರೆ, ಈಗಿರುವುದು ಕೇವಲ ೧೬೦೦೦ ನ್ಯಾಯಾಲಯಗಳು' ಎಂದು ಅಭಿಪ್ರಾಯ ಪಟ್ಟಿದ್ದಾರೆ.

### ಪೇಶಾವರ ಸೆಷನ್ಸ್ ನ್ಯಾಯಾಲಯದ ಹತ್ತಿರ ಸ್ಫೋಟ

ಡಿಸೆಂಬರ್ ೨ ರಂದು ಪಾಕಿಸ್ಥಾನದ ಪೇಶಾವರ್ ನಗರದ ಸೆಷನ್ಸ್ ನ್ಯಾಯಾಲಯದ ಸಮೀಪ ಉಗ್ರರು ನಡೆಸಿದ ಆತ್ಮಹತ್ಯಾ ಬಾಂಬ್ ದಾಳಿಯಲ್ಲಿ ಐದು ಜನರು ಸತ್ತು ಇನ್ನಿತರ ಇಪ್ಪತ್ತು ಜನ ಗಾಯಗೊಂಡಿದ್ದಾರೆ.

### ನ್ಯಾ. ಮುದ್ಗಲ್ ಪಂಜಾಬ್- ಹರಿಯಾಣ ಮುಖ್ಯಸ್ಥ

ದೆಹಲಿ ನ್ಯಾಯಾಲಯದ ಹಿರಿಯ ನ್ಯಾಯಮೂರ್ತಿ ಮುಕುಲ್ ಮುದ್ಗಲ್ ಡಿಸೆಂಬರ್ ೧೨ ರಂದು ಪಂಜಾಬ್-ಹರ್ಯಾಣ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ತಿಂಗಳ ಸುದ್ದಿ

### ದಿನಕರನ್ ಗೈರು : ಬೆಂ. ವಕೀಲ ಸಂಘಕ್ಕೆ ಅರ್ಧ ಗೆಲುವು.

ತಮ್ಮ ವಿರುದ್ಧ ಮಹಾಭಿಯೋಗ ಕ್ರಮಕ್ಕೆ ರಾಜ್ಯ ಸಭೆಯಲ್ಲಿ ಚಾಲನೆ ದೊರಕಿದ ನಂತರ ನ್ಯಾಯಿಕ ಕಲಾಪಗಳಿಂದ ದೂರ ಉಳಿಯಲು ನಿರ್ಧರಿಸಿರುವ ನ್ಯಾ. ದಿನಕರನ್‌ರ ತೀರ್ಮಾನ ಬೆಂಗಳೂರು ವಕೀಲರ ಸಂಘಕ್ಕೆ ನೈತಿಕ ಗೆಲುವಾಗಿ ಪರಿಣಮಿಸಿದೆ. ಈ ವಿವಾದ ಬಹಿರಂಗವಾದಾಗಿನಿಂದ ನ್ಯಾ. ದಿನಕರನ್ ನ್ಯಾಯಿಕ ಕಲಾಪಗಳಿಗೆ ಹಾಜರಾಗಬಾರದೆಂದು ಹೇಳುತ್ತಾ ಬಂದಿದ್ದ ಸಂಘದ ನಿಲುವಿಗೆ ಸಂದ ನೈತಿಕ ಜಯ ಇದು. ಆದರೆ ಇದು ಅರ್ಧ ಗೆಲುವು ಮಾತ್ರ, ಏಕೆಂದರೆ, ಇಡಿ ರಾಜ್ಯದ ನ್ಯಾಯಾಂಗದ ಆಡಳಿತ ಅವರ ಕೈಯಲ್ಲಿದೆ. ಅವರಿನ್ನೂ ಕರ್ನಾಟಕ ಉಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶ. ಈ ನ್ಯಾಯಾಲಯಕ್ಕೆ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡುವ ಅಧಿಕಾರ ಇನ್ನು ಅವರಲ್ಲೆ ಇದೆ.

ತನ್ನ ಸೆಪ್ಟೆಂಬರ್ ೧೩ರ ತೀರ್ಮಾನದಲ್ಲಿ ಸಂಘ, ತಮ್ಮ ಮೇಲಿನ ಆಪಾದನೆಗಳ ತೀರ್ಮಾನ ಆಗುವವರೆಗೆ ದಿನಕರನ್ ಕಲಾಪಗಳಲ್ಲಿ ಭಾಗವಹಿಸಬಾರದು ಎಂದು ಬಯಸಿತ್ತು. ಈ ಸಂಬಂಧ ಒಂದು ದಿನದ ನ್ಯಾಯಾಲಯಗಳ ಕಲಾಪ ಬಹಿಷ್ಕಾರ ಕೂಡ ಜರುಗಿತ್ತು. ನಂತರದ ಹಲವಾರು ಬೆಳವಣಿಗೆಗಳ ನಂತರ ಡಿಸಂಬರ್೧೯ ರ ಉಚ್ಚ ನ್ಯಾಯಾಲಯದ ಸುತ್ತೋಲೆಯಂತೆ ಮುಂದಿನ ಆಜ್ಞೆಯವರೆಗೆ ನ್ಯಾ. ದಿನಕರನ್ ನ್ಯಾಯಿಕ ಕಲಾಪಗಳಲ್ಲಿ ಭಾಗವಹಿಸುತ್ತಿಲ್ಲ. ಆದರೆ ನ್ಯಾಯಾಲಯದ ಆಡಳಿತ ಅವರ ಕೈಯಲ್ಲಿ ಇರಲಿದೆ.

### ಎಚ್‌ಐವಿ ಪೀಡಿತರಿಗಾಗಿ ವಿಶೇಷ ಕಾನೂನು

ಏಡ್ಸ್ ಪೀಡಿತರಿಗೆ ಸಮಾಜದಲ್ಲಿ ಇತರರೊಂದಿಗೆ ಸಮಾನವಾಗಿ ಬದುಕುವ ಹಕ್ಕು ಕಲ್ಪಿಸಿಕೊಡಲಿರುವ ಕಾನೂನೊಂದು ಪಾರ್ಲಿಮೆಂಟಿನ ಮುಂದೆ ಬರಲು ಕಾಯ್ದುಕೊಂಡಿದೆ. ೨೦೦೯ರಲ್ಲಿ ರಚಿತವಾಗಿರುವ ಈ ಕಾನೂನಿನಲ್ಲಿ ಎಚ್‌ಐವಿ ಪೀಡಿತರನ್ನು ನಿರ್ಬಂಧಿಸುವ ಕೆಲ ಅಂಶಗಳಿರುವುದೆ ಬಿಲ್ ಮಂಡನೆ ತಡವಾಗುತ್ತಿರುವುದಕ್ಕೆ ಕಾರಣ.

2009ರಲ್ಲಿ ರಚಿತವಾದ ಈ ಕಾನೂನಿಗೆ ಎರಡು ಉದ್ದೇಶಗಳಿವೆ. ಒಂದು, ಏಡ್ಸ್‌ಪೀಡಿತರಿಗೆ ಸಮಾಜದಲ್ಲಿ ಸಮಾನ ಹಕ್ಕುಗಳನ್ನು ಕಲ್ಪಿಸುವುದು. ಎರಡು, ಏಡ್ಸ್ ಪೀಡಿತರು ಸೋಂಕನ್ನು ಇತರರಿಗೆ ಹರಡದಂತೆ ತಡೆಯುವುದು. ಈ ಎರಡನೆ ಉದ್ದೇಶವನ್ನು ವಿರೋಧಿಸಿ ಲೈಂಗಿಕ ಕಾರ್ಯಕರ್ತರು, ಇತರೆ ಎಚ್.ಐ.ವಿ ಪೀಡಿತರು ಮತ್ತು ಡ್ರಗ್ ಸೇವಿಸುವವರು(ನೆನಪಿರಲಿ:- ಡ್ರಗ್ ಸೇವನೆ ಅಪರಾಧವಲ್ಲ!)ಲಾಬಿ ನಡೆಸಿದ್ದರಿಂದ ಈ ಕಾನೂನಿನ ಮಂಡನೆ ತಡವಾಗುತ್ತಿದೆ. ಈ ಎರಡನೆ ಉದ್ದೇಶದಿಂದ ಮಾಡಿದ ಕಾನೂನಿನ ಕೆಲ ಉಪಬಂಧಗಳಿಂದ ತಮ್ಮ ಸ್ವಾತಂತ್ರ್ಯಕ್ಕೆ (ಎಂದರೆ ಸ್ವೇಚ್ಛಾಚಾರ ಎಂದು ಬೇಕಾದರೂ ತಿಳಿದುಕೊಳ್ಳಿ) ಧಕ್ಕೆಯಾಗುತ್ತಿದೆ ಎಂದು ಅವರ ವಾದ.

ಎಚ್‌ಐವಿ ಪೀಡಿತರಿಗಾಗಿರುವ ಪಾರ್ಲಿಮೆಂಟರಿ ಫೋರಂನ ಅಧ್ಯಕ್ಷ ಆಸ್ಕರ್ ಫರ್ನಾಂಡಿಸ್ ಪ್ರಕಾರ 'ಈ ಮಸೂದೆಯ ಮಂಡನೆ ತಡವಾಗಿರುವುದು ದುರದೃಷ್ಟಕರ'.

## ಕೋರ್ಟಿಗೆ ಅಲೆದು ಸುಸ್ತಾದ ಸಿಬಿಐ

ಹಳೆಯ ಪ್ರಕರಣ ನ್ಯಾಯಾಲಯದಲ್ಲಿದೆ. ಎದುರಾಳಿ ಪತ್ತೆ ಇಲ್ಲ ಎದುರಾಳಿ ಬರದೆ ಪ್ರಕರಣ ಮುಂದುವರೆಯುವುದಿಲ್ಲ. ಪ್ರಕರಣವನ್ನು ನಡೆಸಿ ಏನಾದರೂ ಸಾಧಿಸುವುದು ದೂರವೆ ಉಳಿಯಿತು. ಸಧ್ಯಕ್ಕಂತೂ ಪ್ರಕರಣದ ನಿರ್ವಹಣೆಯ ಖರ್ಚೆ ಮೈಮೇಲೆ ಬರುವಷ್ಟಿದೆ. ಇಂತಹ ಅನುಭವ ಚೆಕ್ ಬೌನ್ಸ್ ಕೇಸಿಗೆ ಎಷ್ಟೋ ವರ್ಷಗಳಿಂದ ನ್ಯಾಯಾಲಯಕ್ಕೆ ಅಲೆದಾಡುತ್ತಿರುವ ಜನಸಾಮಾನ್ಯರಿಗೆ ಆಗಿರುತ್ತದೆ. ಸಿಬಿಐನಂತಹ ಪ್ರತಿಷ್ಠಿತ ತನಿಖಾ ಸಂಸ್ಥೆಗಳಿಗೂ ಇಂತಹ ಅನುಭವ ಹೊಸದೇನಲ್ಲ. ಸಿಬಿಐಗೆ ಸುಸ್ತುಮಾಡಿದ ಪ್ರಕರಣಗಳಲ್ಲಿ ೪೦ ವರ್ಷಗಳಷ್ಟು ಹಳೆಯ ಪ್ರಕರಣಗಳೂ ಸೇರಿವೆ. ಪ್ರಕರಣದ ಪ್ರಾಮುಖ್ಯತೆಯ ದೃಷ್ಟಿಯಿಂದ ನೋಡುವುದಾದರೆ ಕೇವಲ ರೂ. ೨೫೦೦/- ರಿಂದ ಐದು ಕೋಟಿ ರೂಪಾಯಿಯವರೆಗಿನ ಪ್ರಕರಣಗಳು ಇದರಲ್ಲಿ ಸೇರಿವೆ. ಆದ್ದರಿಂದ ಇಂತಹ ೧೯ ಹಳೆಯ ಪ್ರಕರಣಗಳನ್ನು ಹಿಂಪಡೆಯಲು ಸಿಬಿಐ ತೀರ್ಮಾನಿಸಿತು.

೧೯೯೦ರಲ್ಲಿ ಬೆಂಗಳೂರಿನ ಅಂಚೆ ಕಛೇರಿಯೊಂದರ ಅಂಚೆಯಣ್ಣ ಗಂಗಾಧರ ಮಹಾದೇವಪ್ಪ ಗೋಟಗಿ ರೂ. ೭೫೦೦ ಮನಿಆರ್ಡರ್‌ನ್ನು ತನ್ನ ಹೆಸರಿಗೆ ಬರೆದುಕೊಂಡದ್ದಕ್ಕಾಗಿ ಹಾಕಿದ್ದ ಮೊಕದ್ದಮೆ ೨೦೦೯ರಲ್ಲಿ ಹಾಗೆ ಕೊಳೆಯುತ್ತಿತ್ತು ಆಪಾದಿತ ಸಿಕ್ಕಿಲ್ಲವೆಂಬ ಕಾರಣಕ್ಕಾಗಿ. ಇದಲ್ಲದೆ ಸಿರಿಯಾ, ಜೋರ್ಡಾನ್, ನೈಜಿರಿಯಾದ ಆಪಾದಿತ ವ್ಯಕ್ತಿಗಳು ಆಯಾ ದೇಶಕ್ಕೆ ಓಡಿಹೋಗಿರುವುದರಿಂದ ಮತ್ತು ಆ ದೇಶಗಳೊಂದಿಗೆ ಪ್ರತ್ಯರ್ಪಣಾ ಕಾನೂನು (Extedition treaty) ಇಲ್ಲದ್ದರಿಂದ ಇಂಥ ಹಲವಾರು ಪ್ರಕರಣಗಳನ್ನು ಸಿಬಿಐ ಹಿಂಪಡೆದಿದೆ.

**೯ನೇ ವರ್ಷದ ಪ್ರಕಟಣೆ**

ಪ್ರಚಲಿತ

# ಮಹಾಭಿಯೋಗ (Impeachment)

ಅರವಿಂದ ಎಂ. ನೆಗಳೂರ
aravindneglur@gmail.com

ಸಂಸತ್ತಿನ ಮುಂದೆ ಎರಡು ಮಹಾಭಿಯೋಗಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳಿಗೆ ಚಾಲನೆ ನೀಡಲಾಗಿದೆ. ಒಂದು ಕೋಲ್ಕತ್ತಾ ಉಚ್ಚ ನ್ಯಾಯಾಲಯದ ನ್ಯಾ. ಸೌಮಿತ್ರ ಸೇನ್‌ರ ವಿರುದ್ಧ ಇನ್ನೊಂದು ನ್ಯಾ. ದಿನಕರನ್ ವಿರುದ್ಧ.

ನ್ಯಾ. ದಿನಕರನ್ ಮಹಾಭಿಯೋಗವನ್ನು ಎದುರಿಸಬೇಕಾಗಿ ಬಂದಿರುವ ಕಾರಣಗಳು ಜಾಹೀರಾಗಿವೆ. ನ್ಯಾ. ಸೌಮಿತ್ರ ಸೇನ್ ನ್ಯಾಯಾಧೀಶರಾಗುವ ಮೊದಲು ವಕೀಲರಾಗಿದ್ದಾಗ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ವಿರುದ್ಧ ಶಿಪಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಪ್ರಕರಣದಲ್ಲಿ ನ್ಯಾಯಾಲಯದಿಂದ ರಿಸೀವರ್ ಆಗಿ ನೇಮಕಗೊಂಡಿದ್ದರು. ನಂತರ ಹೆಸರಿಗೆ ತಕ್ಕಂತೆ ಕೇವಲ 'ರಿಸೀವ್' ಮಾಡಿದರು. ಸ್ವೀಕರಿಸಿದ್ದಕ್ಕೆ ಲೆಕ್ಕಕೊಡಲಿಲ್ಲ. ನ್ಯಾಯಾಧೀಶರಾದಾಗ 'ಸ್ವೀಕರಿಸಿ'ದ್ದನ್ನು ಹಾಗೆ ಇಟ್ಟುಕೊಂಡು ನ್ಯಾಯಸ್ಥಾನಕ್ಕೆ ಹೋಗಿ ಕುಳಿತರು. ಈ ಆಪಾದನೆಗಳ ಹಿನ್ನೆಲೆಯಲ್ಲಿ ಮಹಾಭಿಯೋಗ (Impeachment) ವ್ಯವಹರಣೆಯನ್ನು ಪ್ರಾರಂಭಿಸಲಾಗಿದೆ.

ಶಬ್ದಕೋಶಗಳ ಪ್ರಕಾರ to impeach ಎಂದರೆ ಸಾರ್ವಜನಿಕ ಸೇವಕರನ್ನು ಸಂಸತ್ತಿನ ಮುಂದೆ ಆಪಾದನೆಗೆ ಗುರಿಮಾಡಿ, ವಿಚಾರಣೆ ಮಾಡಿ, ಆಪಾದಿತ ಸಾರ್ವಜನಿಕ ಸೇವೆಯಲ್ಲಿ ಮುಂದುವರಿಯಬೇಕೊ ಬೇಡವೊ ಎಂದು ತೀರ್ಮಾನಿಸುವ ಅರೆ ನ್ಯಾಯಿಕ ವ್ಯವಹರಣೆ (quasi judicial proceeding).

To impeach ಎನ್ನುವುದಕ್ಕೆ ಸಾಕ್ಷಿಯನ್ನು 'ನಂಬಲನರ್ಹ ವ್ಯಕ್ತಿ' ಎಂದು ನ್ಯಾಯಾಲಯಕ್ಕೆ ತೋರಿಸಿಕೊಡುವುದು ಎನ್ನುವ ಇನ್ನೊಂದು ಅರ್ಥವೂ ಇದೆ. (ನೋಡಿ ಸೆ.೧೫೫, ಭಾರತೀಯ ಸಾಕ್ಷ ಅಧಿನಿಯಮ)

- ಸೆ.೧೫೫, ಭಾರತೀಯ ಸಾಕ್ಷ ಅಧಿನಿಯಮ
- ಭಾರತದ ಸಂಚಿತ ನಿಧಿ
- ಅನುಚ್ಛೇದ ೧೨೪ ಉಪಬಂಧ (ಬಿ) ಖಂಡ (೪)
- ಎಐಆರ್ ೧೯೯೨ ಎಸ್‌ಸಿ ೨೨೧೯
- ಎಐಆರ್ ೧೯೮೧ ಎಸ್.ಸಿ ೧೦೩೨
- [೧೯೯೫] ೫ ಎಸ್‌ಸಿಸಿ ೪೫೩
- ಎಐಆರ್ ೧೯೯೩ ಎಸ್‌ಪಿ ೨೨೧೯
- Judges Inquiry Act, 1968

ಮೇಲೆ ಹೇಳಿದ ಮೊದಲ ಸಂದರ್ಭ ಈ ತಿಂಗಳಲ್ಲಿ ಹೆಚ್ಚು ಪ್ರಸ್ತುತ.

ಒಂದು ವಿಷಯ ಮೊದಲೆ ತಿಳಿದುಕೊಂಡು ಬಿಡೋಣ, ಮಹಾಭಿಯೋಗಕ್ಕೆ ಸಂಬಂಧಿಸಿದಂತೆ ಸಂವಿಧಾನ ನಿರ್ಮಾಪಕರು, ಏನೇ ಚರ್ಚೆ ಮಾಡಿರಲಿ, ಸಂವಿಧಾನದ ವಿಧಿ ವಿಧಾನಗಳಿಗೆ ಎಷ್ಟೇ ಉನ್ನತಾಶಯವಿರಲಿ, ಈ ವಿಧಿ ವಿಧಾನಗಳನ್ನು ಸರ್ವೋಚ್ಚ ನ್ಯಾಯಾಲಯ ಹೇಗೆ ಮಿಮಾಂಸೆ ಮಾಡಿರಲಿ, ಅಂತಿಮವಾಗಿ ಈ ಪ್ರಶ್ನೆ ಸಂಸತ್ತಿನ ಮುಂದೆ ಬಂದಾಗ ಅದು ಕೇವಲ ರಾಜಕಾರಣದ ಅದರಲ್ಲೂ ಜಾತಿ ರಾಜಕಾರಣದ ಪ್ರಶ್ನೆಯಾಗಿ ಬಿಡುತ್ತದೆ. ಈ ಸಂದರ್ಭದಲ್ಲಿಯೂ ಹಾಗೆ ಆಗುವ ಎಲ್ಲ ಲಕ್ಷಣಗಳೂ ಈಗಲೇ ಗೋಚರಿಸುತ್ತಿವೆ.

ಜಾತಿ–ವರ್ಗಗಳ ಕೀಳು ರಾಜಕೀಯವೇನಾದರೂ ಇರಲಿ, ಕಾನೂನು ಈ ಬಗ್ಗೆ ಏನು ಹೇಳುತ್ತದೆಂಬುದರ ಬಗ್ಗೆ ಒಂದು ಕಣ್ನೋಟ ಹಾಯಿಸೋಣ ಬನ್ನಿ.

ಉಚ್ಚ ನ್ಯಾಯಾಂಗದಲ್ಲಿ ನ್ಯಾಯಮೂರ್ತಿಗಳ ಹುದ್ದೆ ಸಂವಿಧಾನಿಕ ಹುದ್ದೆ. ಇವರು ನಿರ್ವಹಿಸಬೇಕಾಗಿರುವ ಜವಾಬ್ದಾರಿಯ ಲಕ್ಷಣಗಳಿಂದಾಗಿ ಅವರು ರಾಜಕೀಯವಾಗಿ ಪ್ರಬಲರಾಗಿರುವವರ ವಿರುದ್ಧವೂ ತೀರ್ಪು ಬರೆಯಬೇಕಾಗಿ ಬರಬಹುದು. ಹಾಗಾಗಿಯೇ ಸಂವಿಧಾನ ಕೆಲವು ಹುದ್ದೆಗಳನ್ನು ನಿರ್ವಹಿಸುವವರಿಗೆ (ಉದಾ : ನ್ಯಾಯಮೂರ್ತಿಗಳು, ಎಲೆಕ್ಷನ್ ಕಮಿಷನರ್, ಆಡಿಟರ್ ಮತ್ತು ಕಂಟ್ರೋಲರ್ ಜನರಲ್ ಇತ್ಯಾದಿ) ಕೆಲವು ವಿಶೇಷ ರಕ್ಷಣೆಯನ್ನು ಕೊಟ್ಟಿದೆ. ಅವುಗಳಲ್ಲಿ ಒಂದು, ಈ ಹುದ್ದೆಯಲ್ಲಿರುವವರನ್ನು ಸಾಮಾನ್ಯ ನೌಕರರನ್ನು ಕೆಲಸದಿಂದ ತೆಗೆದಂತೆ ತೆಗೆಯುವಂತಿಲ್ಲ. ಇನ್ನೊಂದು ಮುಖ್ಯ ರಕ್ಷಣೆಯೆಂದರೆ ಇವರ ಸಂಬಳ, ಭತ್ಯೆ ಭಾರತದ ಸಂಚಿತ ನಿಧಿ (Consolidates Fund of India)ಯಿಂದ ಬರುತ್ತದೆ. ಯಾವುದೆ ನ್ಯಾಯಮೂರ್ತಿಯ ಸಂಬಳವನ್ನು ಸರ್ಕಾರ ನಿಲ್ಲಿಸುವಂತಿಲ್ಲ.

ಸಂವಿಧಾನದ ಅನುಚ್ಛೇದ ೧೨೪ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ನೇಮಕ, ಅವಧಿ, ರಾಜೀನಾಮೆ ಮತ್ತು ವಜಾ ಮಾಡುವುದಕ್ಕೆ ಸಂಬಂಧಿಸಿದೆ. ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ನೇಮಕ, ಅವಧಿ, ರಾಜೀನಾಮೆ ಮತ್ತು ವಜಾಕ್ಕೂ ಇದೆ ಅನುಚ್ಛೇದ ಅವಕಾಶ ಮಾಡಿಕೊಡುತ್ತದೆ.

ಅನುಚ್ಛೇದ ೧೨೪ ಉಪಬಂಧ (ಬಿ) ಪ್ರಕಾರ ನ್ಯಾಯಾಧೀಶರನ್ನು ಖಂಡ (೪) ರಲ್ಲಿ ಹೇಳಿರುವಂತೆ ವಜಾ ಮಾಡಬಹುದಾಗಿದೆ. ಖಂಡ(೪) ರಂತೆ ನ್ಯಾಯಾಧೀಶರನ್ನು ಸೇವೆಯಿಂದ ವಜಾಮಾಡಲು ಭಾರತದ ರಾಷ್ಟ್ರಪತಿಯಿಂದ ಆಜ್ಞೆಯಾಗಬೇಕು. ರಾಷ್ಟ್ರಪತಿ ಹೀಗೆ ಆಜ್ಞೆಮಾಡುವ ಮೊದಲು ಸಂಸತ್ತಿನ ಎರಡೂ ಅಂಗಗಳಲ್ಲಿ ನ್ಯಾಯಾಧೀಶರನ್ನು ವಜಾಮಾಡಲು ೨/೩ರಷ್ಟು ಬಹುಮತದಿಂದ ಅನುಮೋದಿಸಲಾದ ನಿರ್ಣಯವಾಗಿರಬೇಕು. ಇಂತಹ ನಿರ್ಣಯ ಕೇವಲ ಎರಡೆ ಸಂದರ್ಭಗಳಲ್ಲಿ ಮಾಡಬಹುದಾಗಿದೆ. ಒಂದು ನ್ಯಾಯಾಧೀಶರ ಸಾಬೀತಾದ ಅಸಾಮರ್ಥ್ಯ (proven incompetence) ಮತ್ತು ಸಾಬೀತಾದ ದುರ್ವರ್ತನೆ (proven misbehaviour).

ಸಂಸತ್ತು ಅನುಸರಿಸ ಬೇಕಾಗಿರುವ ಕ್ರಮವನ್ನು ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪೊಂದರಲ್ಲಿ (ಎಐಆರ್ ೧೯೯೨ ಎಸ್‌ಸಿ ೨೨೧೯) ಸ್ಪಷ್ಟವಾಗಿ ಹೇಳಿದೆ. ಸದಸ್ಯರ ಕೋರಿಕೆಯಂತೆ ಸಂಸತ್ತಿನ ಸ್ಪೀಕರ್ ಅಥವಾ ರಾಜ್ಯ ಸಭೆಯ ಚೇರ್‌ಮನ್ ನ್ಯಾಯಾಧೀಶರ ವಿಚಾರಣಾ ಕಾಯ್ದೆ ೧೯೬೮ (Judges Inquiry Act, 1968) ಮತ್ತು ಅದರಡಿ ಮಾಡಲಾದ ರೂಲ್‌ಗಳಂತೆ ತ್ರಿವಳಿ ಸದಸ್ಯರ ವಿಚಾರಣಾ ಸಮಿತಿ ರಚಿಸಿ ನ್ಯಾಯಾಧೀಶರ ವಿರುದ್ಧ ಮಾಡಲಾದ ಆಪಾದನೆಗಳ ಸತ್ಯಾಸತ್ಯತೆಯನ್ನು ವಿಚಾರಿಸಿ ಸಂಸತ್ತಿಗೆ ವರದಿ ಕೊಡುವಂತೆ ಕೇಳಬೇಕು. ಈ ಸಮಿತಿ ಸಂಬಂಧಿಸಿದವರನ್ನೆಲ್ಲ ವಿಚಾರಣೆ ಮಾಡಿ ತನ್ನ ವರದಿ ಸಲ್ಲಿಸಿದ ನಂತರ ವರದಿಯನ್ನು ಆಧರಿಸಿ ಸಂಸತ್ತು ೨/೩ ರ ಬಹುಮತದಿಂದ ನ್ಯಾಯಾಧೀಶರನ್ನು ವಜಾ ಮಾಡಲು ರಾಷ್ಟ್ರಪತಿಯನ್ನು ಕೇಳಿಕೊಳ್ಳಬಹುದು.

ಈ ಕ್ರಮ ಅನುಸರಿಸಿ ನ್ಯಾಯಾಧೀಶರನ್ನು ವಜಾಗೊಳಿಸಲು ಕೆಲವು ವಿಧಿ–ನಿಷೇಧಗಳಿವೆ. ಆಪಾದಿತ ನ್ಯಾಯಾಧೀಶನ ನ್ಯಾಯಿಕ ತೀರ್ಮಾನಗಳು ಎಷ್ಟೇ ತಪ್ಪಾಗಿರಲಿ (error of judgment) ಅಂತಹ ತೀರ್ಪನ್ನು ದುರ್ವರ್ತನೆ ಎನ್ನುವಂತಿಲ್ಲ (ನೋಡಿ : ಎಐಆರ್ ೧೯೮೧ ಎಸ್.ಸಿ ೧೦೩೨). ಮೇಲೆ ಹೇಳಿದ ಯಾವ ಕಾನೂನಿನಲ್ಲಿಯೂ 'ದುರ್ವರ್ತನೆ' ಎಂಬುದನ್ನು ವ್ಯಾಖ್ಯಾನಿಸಲಾಗಿಲ್ಲ. ದುರ್ವರ್ತನೆ ಎಂದರೆ ಸನ್ನಡತೆಗೆ ವಿರುದ್ಧವಾದುದು ಮತ್ತು ಸರಿಯಿಲ್ಲದ ಅನುಚಿತ ವರ್ತನೆ ಎಂದ ಸ. ನ್ಯಾಯಾಲಯ ತನ್ನ ಇನ್ನೊಂದು ತೀರ್ಪಿನಲ್ಲಿ ಹೇಳಿದೆ ([೧೯೯೫] ೫ ಎಸ್‌ಸಿಸಿ ೪೫೩).

ಮೇಲ್ತಿಳಿಸಿದ ವಿಚಾರಣಾ ಸಮಿತಿಯ ವ್ಯವಹಾರಣೆಗಳ ಲಕ್ಷಣ ಸ್ವರೂಪಗಳ ಬಗ್ಗೆ ಸ.ನ್ಯಾ ಎಐಆರ್ ೧೯೯೩ ಎಸ್‌ಪಿ ೨೨೧೯ ರಲ್ಲಿ ವಿಸ್ತೃತವಾಗಿ ವಿವರಿಸಿದೆ.

ಕಾನೂನು ಏನೇ ಹೇಳಲಿ ಪ್ರಸ್ತುತ ಸನ್ನಿವೇಶದಲ್ಲಿ ಮಹಾಭಿಯೋಗ ಪ್ರಕ್ರಿಯೆಯಲ್ಲಿ ರಾಜಕೀಯ ಹಿತಾಸಕ್ತಿಗಳು ಪ್ರಮುಖ ಪಾತ್ರ ವಹಿಸುತ್ತವೆಂಬುದರಲ್ಲಿ ಸಂಶಯವಿಲ್ಲ.

## ನ್ಯಾಯಾಲಯಗಳ ಅಂಗಳದಿಂದ

***ನ್ಯಾಯಾಧೀಶರತ್ತ ಚಪ್ಪಲಿ ಎಸೆತದಂತಹ ಪ್ರಕರಣ –ನ್ಯಾಯಾಂಗ ನಿಂದನಾ ಕಾಯ್ದೆ – ಸೆ ೧೪–ಕ್ರಿಮಿನಲ್ ನಿಂದನೆ –ನ್ಯಾಯಾಲಯದ ಅನುಸರಿಸಬೇಕಾಗಿರುವ ಪ್ರಕ್ರಿಯೆ ಏನು?***

ನ್ಯಾಯಾಧೀಶರತ್ತ ಚಪ್ಪಲಿ ಎಸೆಯುವುದು, ನ್ಯಾಯಾಲಯಕ್ಕೆ ಸಲ್ಲಿಸುವ ವಾದ ಪ್ರತಿವಾದಗಳ ಪತ್ರದಲ್ಲಿ ನ್ಯಾಯಾಂಗ ನಿಂದನೆಯ ಭಾಷೆ ಬಳಸುವುದು ಇವುಗಳಲ್ಲಿ ಒಂದು ಸಾಮ್ಯವಿದೆ. ಅದೇನೆಂದರೆ ಇಂತಹ ನಿಂದನೆ ನಡೆದಿರುವುದು ನ್ಯಾಯಾಲಯದ ಕಣ್ಣು ಮುಂದೆ (in the face of the court).

ನ್ಯಾಯಾಲಯದ ಕಣ್ಣು ಮುಂದೆ ನಡೆಯುವ ನ್ಯಾಯಾಂಗ ನಿಂದನೆಯ ಪ್ರಕರಣಗಳಲ್ಲಿ ನ್ಯಾಯಾಲಯ ಅನುಸರಿಸಬೇಕಾಗಿರುವ ಪ್ರಕ್ರಿಯೆಯ ಕುರಿತು ತನ್ನ ತೀರ್ಮಾನವೊಂದನ್ನು ಪ್ರಕಟಿಸಿರುವ ಸ.ನ್ಯಾ.ದ. ತ್ರಿವಳಿ ಪೀಠವೊಂದು ಸೆ. ೧೪ ರಲ್ಲಿ ಹೇಳಿರುವ ಪ್ರಕ್ರಿಯೆಯನ್ನು ಇಂತಹ ಸಂದರ್ಭಗಳಲ್ಲಿ ಅನುಸರಿಸುವ ಅಗತ್ಯವಿಲ್ಲ. ನ್ಯಾಯಾಲಯದ ಕಣ್ಣು ಮುಂದೆ ನಡೆದ ನ್ಯಾಯಾಂಗ ನಿಂದನೆಯ ಪ್ರಕರಣವನ್ನು ಅಂದೆ– ಅಲ್ಲಿಯೇ (then and there itself) ತೀರ್ಮಾನಿಸಬೇಕೆಂದು ಹೇಳಿದೆ.

*(೨೦೦೯ ಎಐಆರ್ ಎಸ್‌ಸಿ ಡಬ್ಲ್ಯೂ ೯೩೩೩)*

***ಸಿ.ಪಿ.ಸಿ ಆ ೨೨ ರೂ.೫ – ಸೆ. ೧೧ – ಮೃತ ಪಕ್ಷಗಾರನ ಕಾನೂನು ಸಮ್ಮತ ಪ್ರತಿನಿಧಿ (Legal representative) ಯಾರೆಂದು ತೀರ್ಮಾನಿಸುವ ಆಜ್ಞೆ ಅಂತಿಮವೆ? ಅದು ಯಾರಿಗೆ ಸಂಬಂಧಿಸಿದಂತೆ ಅಂತಿಮ? ಇಂತಹ ಆಜ್ಞೆ ನಂತರದ ಪ್ರಕರಣಗಳಲ್ಲಿ ರೆಸ್ ಜುಡಿಕೆಟಾ ಎಂದು ಪರಿಗಣಿಸಬಹುದೆ?***

ಮೃತ ಪಕ್ಷಗಾರನ ಕಾನೂನು ಸಮ್ಮತ ಪ್ರತಿನಿಧಿಯನ್ನು ದಾಖಲೆಯ ಮೇಲೆ ತರಲು ನಡೆಯುವ ವಿಚಾರಣೆ (Enquiry) ಯ ಸ್ವರೂಪದ ಕುರಿತಂತೆ ಸರ್ವೋಚ್ಚ ನ್ಯಾಯಾಲಯ ನವೆಂಬರ್ ೨ ರಂದು ತೀರ್ಮಾನವೊಂದನ್ನು ಪ್ರಕಟಿಸಿದ್ದು, ಆ ಪ್ರಕಾರ ಇಂಥ ವಿಚಾರಣೆ ಸಂಕ್ಷಿಪ್ತ ( Summary) ಆಗಿರುವುದರಿಂದ ಅಂಥ ತೀರ್ಮಾನ ಸಾಮಾನ್ಯವಾಗಿ ಬೇರೆ ನ್ಯಾಯಿಕ ವ್ಯವಹರಣೆಗಳಲ್ಲಿ ರೆಸ್ ಜುಡಿಕೆಟಾ ಎಂದು ಹೇಳಲು ಬರುವುದಿಲ್ಲ. ಆದರೆ ಅದೆ ದಾವಾ ಮತ್ತು ಅದೆ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಅಂತಹ ತೀರ್ಮಾನ ಅಂತಿಮ. ಈ ತೀರ್ಮಾನವನ್ನು ಅದೆ ಪ್ರಕರಣದಲ್ಲಿ ರೆಸ್ ಜುಡಿಕೆಟಾ ಎಂದು ಪರಿಗಣಿಸಬಹುದಾಗಿದೆ.

*(೨೦೦೯ ಎಐಆರ್ ಎಸ್‌ಸಿಡಬ್ಲ್ಯೂ ೯೮೫೫*

***ಸೆ. ೧೪೫ ದಂಡ ಪ್ರಕ್ರಿಯಾ ಸಂಹಿತೆ – ಪ್ರಥಮ ವರವಾನ ವರದಿ – ಅದರ ಅಡಕಗಳೇನಿರಬೇಕು? ಏನೆಲ್ಲ ಹೇಳಿರಬೇಕು? ಅವಶ್ಯಕ ಸಂಗತಿಗಳನ್ನು ಹೇಳದೆ ಬಿಡುವುದರ ಪರಿಣಾಮವೇನು?***

ಪ್ರಥಮ ವರ್ತಮಾನ ವರದಿಯಲ್ಲಿ ಅಪರಾಧಕ್ಕೆ ಸಂಬಂಧಿಸಿದ ಸಂಗತಿಗಳನ್ನು ಕಡ್ಡಾಯವಾಗಿ ಹೇಳಲೇಬೇಕೆಂಬ ದೃಷ್ಟಿಕೋನವಿರುವಂತೆ ಇದಕ್ಕೆ ತದ್ವಿರುದ್ಧವಾಗಿ ಪ್ರ.ವ.ವ ಅಪರಾಧದ ಎನ್‌ಸೈಕೆಪಿಡಿಯಾ ಅಲ್ಲ. ಹಾಗಾಗಿ ಅದರಲ್ಲಿ ಹೇಳದೆ ಬಿಟ್ಟ ವಿಷಯದಿಂದ ಪ್ರಕರಣದ ಅಂತಿಮ ಫಲಿತಾಂಶದ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲವೆಂಬ ದೃಷ್ಟಿಕೋನ ಸಹ ಇದೆ.

ಈ ಎರಡು ತದ್ವಿರುದ್ಧ ವಾದಗಳ ಮಧ್ಯದ ದಾರಿಯನ್ನಾರಿಸಿಕೊಂಡಿರುವ ಸ.ನ್ಯಾ.ದ ನ್ಯಾಯ ಪೀಠವೊಂದು ತನ್ನ ತೀರ್ಪಿನಲ್ಲಿ ಹೀಗೆ ಅಭಿಪ್ರಾಯ ಪಟ್ಟಿದೆ. ಪ್ರ.ವ.ವ. ಅಪರಾಧದ ಎನ್‌ಸೈಕ್ಲೊಪೆಡಿಯಾ ಅಲ್ಲ ನಿಜ. ಆದರೆ, ಅಪರಾಧಕ್ಕೆ ಸಂಬಂಧಿಸಿದ ಅವಶ್ಯಕ ಸಂಗತಿಗಳನ್ನು ಪ್ರವ.ವಯಲ್ಲಿ ಹೇಳಲೇ ಬೇಕು. ಹಾಗೆ ಹೇಳದೆ ಬಿಡುವುದರಿಂದ ಪ್ರವ.ವ.ಯ ವಿಶ್ವಸನೀಯತೆಗೆ ಧಕ್ಕೆ ತಗಲುತ್ತದೆ.

*[೨೦೦೯ ಎಐಆರ್ ಎಸ್‌ಸಿಡಬ್ಲ್ಯೂ]*

ಲಹರಿ...

# ಬೆಳ್ಳಿಹಬ್ಬದ ಸಂಭ್ರಮ

ಈ ವರ್ಷದ ಮಾರ್ಚ್ ೧೭ರಂದು ನಮ್ಮ ನೆಚ್ಚಿನ ಸಂಸ್ಥೆ ಲಹರಿಗೆ ೨೫ ವರ್ಷಗಳು ತುಂಬಲಿವೆ. ಈ ೨೫ ವರ್ಷಗಳು ನಡೆದು ಬಂದ ಹಾದಿ ಹೂವಿನ ಹಾಸಿಗೆಯೇನೂ ಆಗಿರಲಿಲ್ಲ. ಹಾಗೆಂದು ಅದು ಕೇವಲ ಕಲ್ಲು-ಮುಳ್ಳಿನ ಅಂಕುಡೊಂಕಾದ ದುರ್ಗಮ ಮಾರ್ಗ ಎಂದರೂ ತಪ್ಪಾದೀತು. ಈ ಕಾಲು ಶತಮಾನದಲ್ಲಿ ನಾವು ನಮ್ಮ ಪಾಲಿನ ನೋವು-ನಲಿವು, ದುಃಖ-ಸಂತೋಷ, ಹತಾಶೆ-ಹೆಮ್ಮೆಯ ಕ್ಷಣಗಳನ್ನು ಅನುಭವಿಸಿ ೨೫ರ ಮೈಲಿಗಲ್ಲಿಗೆ ಬಂದು ನಿಂತಿದ್ದೇವೆ. ಕ್ರಮಿಸಬೇಕಾದ ದಾರಿ ಇನ್ನೂ ಇದೆ ನಿಜ. ಆದರೆ ಒಂದು ಬಾರಿ ಹೊರಳಿ ನೋಡುವುದು ಬೇಡವೆ?

ನಮ್ಮ ಸಹೋದರ ಪತ್ರಿಕೆ *Communique* ನ ಸಂಪಾದಕ ಅರವಿಂದ ಎಂ. ನೆಗಳೂರ ಪ್ರಾರಂಭಿಸಿರುವ ೩ ಲೇಖನಗಳ ಮಾಲೆಯ ಮೊದಲ ಕಂತು ಇಲ್ಲಿದೆ. ಮೊದಲ ಭಾಗವಾಗಿ ಲಹರಿಯ ಸಂಸ್ಥಾಪಕರಲ್ಲಿ ಒಬ್ಬರಾಗಿ, *Communique* ಪತ್ರಿಕೆಯನ್ನು ಹುಟ್ಟು ಹಾಕಿ, ಅದನ್ನು ೨೦ ವರ್ಷಗಳ ಕಾಲ ಸಂಪಾದಿಸಿಕೊಂಡು ಬಂದ ಶ್ರೀ ಕೆ. ಸೂರ್ಯನಾರಾಯಣ ರಾಯರೊಂದಿಗೆ ಸಂದರ್ಶನ.

ಲಹರಿ ನಡೆದು ಬಂದ ದಾರಿಯ ಚಿತ್ರಣ ಕೊಡುತ್ತದೆ ಈ ಲೇಖನ ಮಾಲೆ.

– ಸಂ.

**ವಿಶೇಷ ಲೇಖನ ಮಾಲೆ**

***ಸಂದರ್ಶಕ: ನಮಸ್ಕಾರ, ನಿಮ್ಮ ಸಂದರ್ಶನದ ಮೂಲಕ ಲಹರಿ ನಡೆದು ಬಂದ ದಾರಿಯತ್ತ ತಿರುಗಿ ನೋಡುವ ಈ ಪ್ರಯತ್ನ ನನಗೊಂದು ಅಪೂರ್ವ ಅವಕಾಶ.***

ರಾಯರು: ನಮಸ್ಕಾರ, ನನ್ನ ಅನುಭವ ಹಂಚಿಕೊಳ್ಳುವುದರಲ್ಲಿ ನನಗೂ ಸಂತೋಷವಿದೆ.

***ಸಂ: ಲಹರಿ ನಿಮ್ಮ ಕನಸಿನಲ್ಲಿ ಯಾವಾಗ ಹುಟ್ಟಿತು?***

ರಾಯರು: ೧೯೮೫-೮೬ರಲ್ಲಿ.

***ಸಂ: ನಿಮ್ಮ ಕನಸು ಸಾಕಾರಗೊಳ್ಳಲು ನೀವೇನು ಮಾಡಿದಿರಿ?***

ರಾಯರು: ನಾನು ಮತ್ತಿತರ ಕೆಲ Likeminded ವಕೀಲರು ಸೇರಿ ಬೆಂಗಳೂರು ವಕೀಲರ ಸಂಘದ ಹಳೆಯ ಕಟ್ಟಡದಲ್ಲಿದ್ದ ಗ್ರಂಥಾಲಯದಲ್ಲಿ, ಲಿಟರರಿ ಯೂನಿಯನ್ನಿನಲ್ಲಿ ಪ್ರತಿ ಶುಕ್ರವಾರ ಸಂಜೆ ಒಂದು ದುಂಡು ಮೇಜಿನ ಸುತ್ತ ಕುಳಿತು ಸೂರ್ಯನ ಕೆಳಗಿರಬಹುದಾದ ಎಲ್ಲ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದೆವು. ಇದಕ್ಕೆ ನಾವು ಲಘುವಾಗಿ Round table Conference ಎಂದು ಹೆಸರಿಟ್ಟುಕೊಂಡಿದ್ದೆವು. ಹೀಗೆ ಉಗಮವಾಯಿತು ಲಹರಿ.

***ಸಂ: ಅಂದಿನ ದಿನಗಳಲ್ಲಿ ನಿಮ್ಮೊಂದಿಗಿದ್ದವರು ಯಾರು?***

ರಾಯರು: ಸಿ. ಲಕ್ಷ್ಮೀನಾರಾಯಣ ರಾವ್, ಎಂ.ಎಸ್. ನಾಗಭೂಷಣ ರಾವ್, ಶೇಷಗಿರಿ ರಾವ್, ಪಿ.ಎಸ್. ಶ್ರೀಧರಮೂರ್ತಿ, ಇವರಲ್ಲದೆ ಈಗ ನಮ್ಮೊಂದಿಗಿಲ್ಲದ ಪಿ.ಜಿ.ಸಿ. ಚೆಂಗಪ್ಪ, ಜೆ. ಜೆಷ್ಠಮಲ್, ಜಿ.ಎಸ್. ನಾಗರಾಜರಾವ್, ಎಸ್ ವಸಂತ ಕುಮಾರ್ ಮತ್ತಿತರರು ನನ್ನೊಂದಿಗಿದ್ದರು.

***ಸಂ: ಈ ರೌಂಡ್ ಟೇಬಲ್ ಕಾನ್ಫರೆನ್ಸಿಗೆ ವ್ಯವಸ್ಥಿತ ರೂಪ ಬಂದದ್ದು ಯಾವಾಗ?***

ರಾಯರು: ಸುಮಾರು ೧೭-೧೮ ವರ್ಷಗಳ ಹಿಂದೆ ಒಂದು ಬಾರಿ ಚೆಂಗಪ್ಪ ಲಹರಿಗೊಂದು ನಿಯಮಾವಳಿ ರಚಿಸೋಣ. ಅದಕ್ಕೆ ಪದಾಧಿಕಾರಿಗಳನ್ನು ಆಯ್ಕೆ ಮಾಡೋಣ, ಹೀಗೆ ಮಾಡಿದರೆ ಲಹರಿ ಬೆಳೆಯಲು ಅನುಕೂಲವಾಗುತ್ತದೆಂದು ಸೂಚಿಸಿದರು. ಎಲ್ಲರೂ ಒಪ್ಪಿ ಅದಕ್ಕೊಂದು ಸಾಂಸ್ಥಿಕ ರೂಪ ಕೊಡಲಾಯಿತು.

***ಸಂ: ಲಹರಿ ಸ್ಥಾಪಿಸಿದ ಉದ್ದೇಶವೇನು ಹೇಳುತ್ತೀರಾ?***

ರಾಯರು: ಲಹರಿ ಸ್ಥಾಪಿಸಬೇಕೆಂದುಕೊಂಡಾಗ ಎರಡು ಉದ್ದೇಶಗಳಿದ್ದವು. ಒಂದು, ನಮ್ಮ ವೃತ್ತಿಗೆ ಬರುವ ಯುವ ವಕೀಲರಿಗೆ ವ್ಯಕ್ತಿಮಟ್ಟದಲ್ಲೆ ಆಗಲಿ ಸಾಂಸ್ಥಿಕವಾಗಿ ಆಗಲಿ ಒಂದು ಆದರ್ಶ-ಮಾದರಿ ಎಂಬುದಿರಲಿಲ್ಲ. ಈ ಕೊರತೆಯನ್ನು ನೀಗಿಸಬೇಕೆಂಬುದು ಒಂದು ಉದ್ದೇಶ.

ಎರಡನೆಯದಾಗಿ, We wanted to provide forum for constructive avtivity within our community. ಅಂದು ರಚನಾತ್ಮಕ ಕಾರ್ಯಕ್ರಮಗಳನ್ನೇನಾದರೂ ಮಾಡಬೇಕೆಂದರೆ ವಕೀಲರಿಗಿದ್ದ ಅವಕಾಶಗಳು ಕಡಿಮೆ. ಇರಲೇ ಇಲ್ಲವೆಂದರೂ ನಡೆಯುತ್ತದೆ. ಲಹರಿ ಇಂತಹ ರಚನಾತ್ಮಕ ಚಟುವಟಿಕೆಗಳಿಗೊಂದು ವೇದಿಕೆ.

***ಸಂ: ಲಹರಿಯ ರಚನಾತ್ಮಕ ಚಟುವಟಿಕೆಗಳ ಬಗ್ಗೆ ಹೇಳುತ್ತೀರಾ?***

ರಾಯರು: ಈ ಪತ್ರಿಕೆಗಳು, Communique ಮತ್ತು ಸಂವಾದ ಹಾಬಿ ಬರಹಗಾರರಿಗೆ ಬರವಣಿಗೆಗೆ ಒಂದು ಅವಕಾಶ ಕಲ್ಪಿಸಿಕೊಡುತ್ತದೆ. ಇದಲ್ಲದೆ ನಮ್ಮ ಅಂಗ ಸಂಸ್ಥೆಗಳ ಮೂಲಕವೂ ನಾವು ಸಾಕಷ್ಟು ಕೆಲಸ ಮಾಡುತ್ತಿದ್ದೇವೆ. ಮತ್ತು ಕೆಲಸ ಮಾಡುವ ಉತ್ಸಾಹ ಇರುವವರಿಗೆ ಅವಕಾಶ ಮಾಡಿಕೊಡುತ್ತಿದ್ದೇವೆ.

ನಮ್ಮ ಪ್ರತಿ ಶುಕ್ರವಾರ ಸಂಜೆಯ 'ಚಿಂತನ-ಮಂಥನ' ಅಂತಹ ಇನ್ನೊಂದು ಅವಕಾಶ.

***ಸಂ: ಲಹರಿಯ ಅಂಗ ಸಂಸ್ಥೆಗಳು ಯಾವುವು?***

ರಾಯರು: ಲಹರಿ ವಕೀಲರ ವೇದಿಕೆ, ಲಹರಿ ಫೌಂಡೇಶನ್, ಲಹರಿ ಲಾ ಅಕಾಡೆಮಿ, ಲಹರಿ ಜರ್ನಲಿಸ್ಟ್ ಗಿಲ್ಡ್, ಲಹರಿ ಬುಕ್ ಬ್ಯಾಂಕ್. ಇವು ಲಹರಿ ಪರಿವಾರದ ಅಂಗ ಸಂಸ್ಥೆಗಳು.

***ಸಂ: ಈ ಸಂಸ್ಥೆಗಳ ಕಾರ್ಯ ಚಟುವಟಿಕೆಗಳೇನು?***

ರಾಯರು: ಲಹರಿ ವಕೀಲರ ವೇದಿಕೆ ವಕೀಲರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘಟನೆ. ನಮ್ಮ ಫೌಂಡೇಶನ್ ಸುವ್ಯವಸ್ಥಿತ ಹಣಕಾಸಿನ ಸಂಸ್ಥೆ. ಇಲ್ಲಿ ಸುಮಾರು ೫ ಲಕ್ಷ ರೂಪಾಯಿಗಳಷ್ಟು ಮೂಲಧನ ಭದ್ರವಾಗಿದೆ. ವೈದ್ಯಕೀಯ ನೆರವಿನ ಅಗತ್ಯವಿರುವ ವಕೀಲ ಬಂಧುಗಳಿಗೆ ಸಹಾಯ ಇಲ್ಲಿಂದ ಲಭ್ಯ. ಲಾ ಅಕಾಡೆಮಿಯಿಂದ ನಾವು ಭವಿಷ್ಯದ ವಕೀಲರನ್ನು - ನ್ಯಾಯಾಧೀಶರನ್ನು ತಯಾರು ಮಾಡುತ್ತೇವೆ. ನಮ್ಮ ಜರ್ನಲಿಸ್ಟ್ ಗಿಲ್ಡ್ – ಲಾ ರಿಪೋರ್ಟಿಂಗ್ ಅನ್ನು ಕಲಿಸುವ ಸಂಸ್ಥೆ. ಇನ್ನು ನಮ್ಮ ಬುಕ್ ಬ್ಯಾಂಕ್ ಬಗ್ಗೆ ಈಗಾಗಲೆ ಈ ಪತ್ರಿಕೆಯಲ್ಲಿ ವರದಿ ಬಂದಿದೆ.

***ಸಂ: ಲಹರಿ ಬಳಗದ ಸದಸ್ಯರ ಸಂಖ್ಯೆ ಎಷ್ಟು?***

ರಾಯರು: ನಮ್ಮಲ್ಲೀಗ ಸುಮಾರು ೬೦೦ ಆಜೀವ ಸದಸ್ಯರು ಮತ್ತು ಸುಮಾರು ೧೦೦ ಜನ ವಾರ್ಷಿಕ ಸದಸ್ಯರಿದ್ದಾರೆ.

***ಸಂ: ಲಹರಿ ಇಲ್ಲಿಯವರೆಗೆ ನಡೆದುಬಂದ ದಾರಿಯ ಬಗ್ಗೆ ಸಮಾಧಾನ ಇದೆಯೆ?***

ರಾಯರು: ಇದೆ. ಆದರೆ ಇದೊಂದು ವಕೀಲರ Mass Movement ಆಗಲಿಲ್ಲ ಎನ್ನುವ ಕೊರಗೂ ಇದೆ. ಜೊತೆಗೆ ಲಹರಿ ಬೆಂಗಳೂರಿನ ಹೊರಗಿನ ಜಿಲ್ಲೆಗಳಿಗೂ ಪಸರಿಸಿಲ್ಲ ಎಂಬ ಅಸಮಾಧಾನವೂ ಇದೆ.

ಇನ್ನೊಂದು ಬಲವಾದ ಅಸಮಾಧಾನವೆಂದರೆ ನಮ್ಮ ಸಂಸ್ಥೆಗೆ ಪದಾಧಿಕಾರಿಗಳಾಗಿ ಆಯ್ಕೆಯಾಗುವ ಹಲವರು ಇದನ್ನೊಂದು ಅಲಂಕಾರಿಕ ಹುದ್ದೆ ಎಂದು ಭಾವಿಸುತ್ತಾರೆ. ಅವರಿಂದ ಸಂಸ್ಥೆಗೆ ಉಪಯೋಗವಿಲ್ಲ.

***ಸಂ: ಈ ೨೫ ವರ್ಷಗಳಲ್ಲಿ ಏನು ಟೀಕೆ, ಕುಚೇಷ್ಟೆಗಳನ್ನು ಕೇಳಬೇಕಾಗಿ ಬಂದಿದೆ?***

ರಾಯರು: ಲಹರಿ ಒಂದು elite organisation ಅನ್ನುವ ಟೀಕೆ ಆಗಾಗ ಬರುತ್ತಿರುತ್ತದೆ. ಇದು ಆಂಶಿಕವಾಗಿ ನಿಜವೂ ಹೌದು.

***ಸಂ: ಲಹರಿ ಮುಂದಿನ ದಿನಗಳಲ್ಲಿ ಯಾವ ದಾರಿಯಲ್ಲಿ ನಡೆಯಬೇಕೆಂಬ ಬಗ್ಗೆ ನಿಮ್ಮ ಕನಸೇನು?***

ರಾಯರು: ನಾವು ಎಲ್ಲರನ್ನೂ ತೆರೆದ ತೋಳುಗಳಿಂದ ಸ್ವಾಗತಿಸುತ್ತೇವೆ. ಆದರೆ ಯಾರನ್ನೂ ಹುಡುಕಿಕೊಂಡು ಹೋಗುವುದಿಲ್ಲ. ಬಹುಶಃ ಇದೇ ಕಾರಣದಿಂದ ನಮ್ಮ ಸಂಸ್ಥೆ ಬೃಹದಾಕಾರವಾಗಿ ಬೆಳೆದಿಲ್ಲ. ಮುಂದಿನ ದಿನಗಳಲ್ಲಿ ಲಹರಿ ಬೆಂಗಳೂರಿನ ಹೊರಗೂ ಬೆಳೆಯಲಿ ಮತ್ತು ವಕೀಲ ಬಾಂಧವರ ಮಧ್ಯದಲ್ಲಿ ಇದೊಂದು Mass Movement ಆಗಲಿ, ಇದು ನಮ್ಮೆಲ್ಲರ ಕನಸು.

***ಸಂ: ಕೊನೆಯ ಪ್ರಶ್ನೆ. ಈ ೨೫ ವರ್ಷಗಳಲ್ಲಿ ನೀವೇಕೆ ಒಂದೆ ಒಂದು ಹುದ್ದೆಯನ್ನೂ ಲಹರಿಯಲ್ಲಿ ಒಪ್ಪಿಕೊಂಡಿಲ್ಲ?***

ರಾಯರು: ನೋಡಿ, ಲಹರಿ is a democratic organisation. ಇಲ್ಲಿ ಎಲ್ಲ ಪದಾಧಿಕಾರಿಗಳ ಆಯ್ಕೆ ನಡೆಯುವುದು ಚುನಾವಣೆ ಮೂಲಕ. ನಾನು ಚುನಾವಣಾ ಪರಿಧಿಯ ಹೊರಗೆ ನಿಂತು ಸಂಸ್ಥೆ ನಡೆಸುವ ಜವಾಬ್ದಾರಿ ನಿರ್ವಹಿಸುತ್ತಿದ್ದೇನೆ. ಜೊತೆಗೆ ವೈಯಕ್ತಿಕವಾಗಿ ನಾನು ಪದಾಧಿಕಾರಿಯಾಗುವುದನ್ನು ಇಷ್ಟ ಪಡುವುದಿಲ್ಲ. ಏಕೆಂದರೆ, ಪದಾಧಿಕಾರಿಯಾಗಿ ಬಹಳಷ್ಟು ಕೆಲಸಮಾಡಬಹುದಾದರೂ ಅವರಿಗಿರುವ limitations ನನಗಿಲ್ಲ. ನನಗೆ ಇದು ಒಂದು advantage.

***ಸಂ: ಸಂದರ್ಶನಕ್ಕೆ ಒಪ್ಪಿದ್ದಕ್ಕೆ ಧನ್ಯವಾದಗಳು. ನಮಸ್ಕಾರ***

ರಾಯರು: ನಮಸ್ಕಾರ. ◇

ಕಮ್ಯುನಿಕ್ ಮತ್ತು ಸಂವಾದಕ್ಕೆ
ಚಂದಾದಾರರಾಗಲು
ಸಂಪರ್ಕಿಸಿ:
ಶ್ರೀ ಎಸ್. ಗೋಪಾಲ್
೯೪೪೮೮ ೬೪೮೨೩
ಶ್ರೀ ಅಶೋಕ್ ಕುಮಾರ್
೯೮೪೫೩ ೬೯೧೩೦

ಜಾಹೀರಾತಿಗಾಗಿ ಸಂಪರ್ಕಿಸಬೇಕಾದ
ಟೆಲಿಫೋನ್ ಸಂಖ್ಯೆ :
೯೪೪೮೨೨೪೦೭೩೧

## ದುಬಾರಿ ಸರಳತೆ

ಸರಳತೆಯನ್ನು ಬೋಧಿಸಿದ ಮಹಾತ್ಮನ ಹೆಸರಿನಲ್ಲಿ ೧೨ ಲಕ್ಷ ರುಪಾಯಿಗಳ ಪೆನ್ನಿನ ಮಾರಾಟ! ಅಷ್ಟಲ್ಲದೆ ಪೆನ್ನಿನ ಮೇಲೂ ಆ ಮಹಾತ್ಮನ ಚಿತ್ರ. ಇದನ್ನು ವಿರೋಧಿಸಿ ದೆಹಲಿಯ ಇಬ್ಬರು ವಕೀಲರಿಂದ ಸರ್ವೋಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲೆ. ದಾಖಲಿಸಿದ ದಿನ ಎಲ್ಲ ಪತ್ರಿಕೆಗಳಲ್ಲಿ ಇದೆ ಸುದ್ದಿ. ನಂತರ ಈ ಮೊಕದ್ದಮೆ ಏನಾಯಿತು ಯಾರಿಗೂ ತಿಳಿಯದು. ಇದು ಡಿಸೆಂಬರ್ ತಿಂಗಳ ವಿಶೇಷ ಪೆನ್‌ಗಳ ಮಾರಾಟದಲ್ಲಿ ಅಂತರ ರಾಷ್ಟ್ರೀಯವಾಗಿ ಪ್ರಸಿದ್ಧಿ ಪಡೆದಿರುವ ಮಾಂಟ್ ಬ್ಲ್ಯಾಂಕ್ ಇತ್ತೀಚೆಗೆ Limited Edition 241 ಮತ್ತು Limited Edition 3000 ಹೆಸರಿನ ಎರಡು ಮಾದರಿ ಪೆನ್‌ಗಳನ್ನು ಮಾರುಕಟ್ಟೆಗೆ ಬಿರುಗಡೆ ಮಾಡಿತು. ಬೆಲೆ ೧೨ ಲಕ್ಷ ರುಪಾಯಿಗಳು. ಮೊದಲನೆ ಮಾದರಿಯ ಪೆನ್ನಿನ ಹೆಸರಿನಲ್ಲಿರುವ ೨೪೧ ಸಂಖ್ಯೆಯ ಮಹತ್ವವೆಂದರೆ ೧೯೩೦ ದಂಡಿ ಯಾತ್ರೆಯ ಸಮಯದಲ್ಲಿ ಗಾಂಧೀಜಿ ನಡೆದ ಒಟ್ಟು ಮೈಲಿಗಳ ಸಂಖ್ಯೆ.

ಇದನ್ನು ವಿರೋಧಿಸಿ ದೆಹಲಿಯ ಇಬ್ಬರು ವಕೀಲರಿಂದ ಸರ್ವೋಚ್ಚ ನ್ಯಾಯಾಲಯದಲ್ಲಿ ಸೂಕ್ತ ಆದೇಶ ಕೋರಿ ಪ್ರಕರಣ ದಾಖಲಾಯಿತು. ಪೆನ್ನಿನ ಮೇಲೆ ವಾಣಿಜ್ಯ ಬಳಕೆಗಾಗಿ ಗಾಂಧೀಜಿ ಚಿತ್ರ ಮುದ್ರಿಸಲು ಅವರ ಮೊಮ್ಮಗ ತುಷಾರ್‌ಗಾಂಧಿ ಅನುಮತಿ ಕೊಟ್ಟಿರುವುದನ್ನು ಪ್ರಶ್ನಿಸಿರುವ ಮೊಕದ್ದಮೆ ಹೇಳುವುದೇನೆಂದರೆ, 'ಈ ರೀತಿಯ ರಾಷ್ಟ್ರೀಯ ನಾಯಕರ ಚಿತ್ರದ ಬಳಕೆ Emblames and Names (Prevention of Improper Use) Act, 1950, ಕಾಯ್ದೆಯ ಸೆಕ್ಷನ್ ೨ಕ್ಕೆ ವಿರುದ್ಧವಾಗಿದೆ.

## ಕವಿ–ಕಾವ್ಯ ಪರಿಚಯ
## ಕವಿಯೊಂದಿಗೆ ಮಾತು–ಕಥೆ

ಕಾವ್ಯ ಅಭಿವ್ಯಕ್ತಿಯ ಮಾಧ್ಯಮವಾಗಿ ಕೆಲವರಿಗೆ ಮಾತ್ರ ಒಲಿಯುವ ಕಲೆ. ಕವಿಯ ಬದುಕಿನ ದಟ್ಟ ಅನುಭವ ಶಬ್ದವಾಗಿ ಹೊರ ಬರಲು ತವಕಿಸುವ ಗಳಿಗೆಯಲ್ಲಿ ಕಾವ್ಯ ಒಡಮೂಡುತ್ತದೆ ಎನ್ನುವುದು ನಿಜವಾದರೆ ಕವಿಗೆ ಅನುಭವವಂತೂ ಬೇಕೇ ಬೇಕು. ಜೊತೆಗೆ ಅಮೂರ್ತ ಭಾವನೆಗಳಿಗೆ ಮಾತಿನ ರೂಪ ಕೊಡಲು ಭಾಷಾತಾಕತ್ತೂ ಬೇಕು. ಹಾಗೆಂದು ಇದು ತಾಕತ್ತಿನಿಂದ ಭಾರ ಎತ್ತಿ ಎಸೆದಂತೆ ಮಾಡುವ ಕೆಲಸವಲ್ಲ. ಬದುಕುಣಿಸಿದ ಅನುಭವಗಳ ರಾಶಿಯನ್ನು ಒಡಲೊಳಗಿಟ್ಟುಕೊಂಡು, ಕಾವು ಕೊಟ್ಟು ಕಾವ್ಯವಾಗಿ ಹೆರುವ ಕ್ರಿಯೆ ಅತ್ಯಂತ ಸೃಜನಶೀಲ ಕ್ರಿಯೆ, ಕಾವ್ಯ ಎಲ್ಲರಿಗೂ ಸಿದ್ಧಿಸುವುದಲ್ಲ, ಏಕೆಂದರೆ ಕಾವ್ಯದ, ಕವಿಯ ಮನೋಧರ್ಮ ಬೇರೆ, ಕಾವ್ಯದ ಭಾಷೆ ಬೇರೆ.




It is submittes that the petitioner..... ಎಂದು ಯಾರಾದರೂ, ಕಥೆಯನ್ನು ನೀರಸ ಶಬ್ದಗಳಲ್ಲಿ ನಿರ್ಭಾವುಕವಾಗಿ ಹೇಳುವ ಕಸುಬಿನ ವಕೀಲರು ಕವಿಯಾಗುವುದು, ಕಾವ್ಯ ಬರೆಯುವುದು ಅತ್ಯಂತ ಅಚ್ಚರಿಯ ಸಂಗತಿ. Pleading ಮತ್ತು ಕಾವ್ಯ ಎತ್ತಣಿಂದೆತ್ತಣ ಸಂಬಂಧ? ಒಂದು ಉತ್ತರ ಧ್ರುವವಾದರೆ ಇನ್ನೊಂದು ದಕ್ಷಿಣ ಧ್ರುವವಲ್ಲವೆ? ಈ ಎರಡೂ ಧ್ರುವಗಳು ಒಬ್ಬರಲ್ಲಿ ಸಂಗಮಿಸಿದ ಅಪರೂಪದ–ವಕೀಲ ಕವಿ– ಅಥವಾ ಕವಿ–ವಕೀಲ ಎನ್ನಿಬೇಕಾದರೆ ನಮ್ಮ ನಡುವಿನ ಸಿ. ಪ್ರಕಾಶ್. ಅವರ ಆರನೇಯ ಕವನ ಸಂಕಲನ 'ಕತ್ತಲು–ಬೆಳಕು' ಕಳೆದ ತಿಂಗಳು ಬೆಳಕು ಕಂಡಿತು. ೪೫ ಕವನಗಳ ಈ ಸಂಕಲನ ೧೯–೧೧–೨೦೦೯ ರಂದು ವಕೀಲರ ಭವನದಲ್ಲಿ ನಡೆದ ಸಮಾರಂಭದಲ್ಲಿ ಬಿಡುಗಡೆಯಾಯಿತು.

ಈ ಸಂದರ್ಭಕ್ಕಾಗಿ ಅವರೊಂದಿಗೆ ಒಂದು ಚಿಕ್ಕ ಮಾತು ಕಥೆ ನಡೆಯಿತು 'ಸಂವಾದ'ಕ್ಕಾಗಿ.

"ನಿಮ್ಮ ಕಾವ್ಯಕ್ಕೆ ವಸ್ತುವಾಗಲು ಎರಡು extreme end ಗಳಾದ 'ಕತ್ತಲು–ಬೆಳಕೇ' ಏಕೆ ಬೇಕಿತ್ತು?" ಎಂಬ ಪ್ರಶ್ನೆಗೆ, "ಕತ್ತಲು ಬೆಳಕು ಬದುಕನ್ನು ತಬ್ಬಿ ಹಿಡಿದಿರುವ ಮೂಲ ಬಿಂದುಗಳು, ಹಾಗಾಗಿ ಇವು ಈ ಸಂಕಲನದ ಕವನದ ವಸ್ತುಗಳಾದವು. ಅದೂ ಅಲ್ಲದೆ, ಇವೆರಡೂ ಎರಡು Extreme end ಗಳಾಗಿರುವುದರಿಂದ ಮಧ್ಯೆ ಹರಡಿದ ಅಂತರ್ಜಾಲ ಎಷ್ಟು ವಿಶಾಲವಾಗಿದೆ ನೋಡಿ" ಎಂದರವರು. ಅದು ನಿಜ. ಕತ್ತಲು ಬೆಳಕಿನ ಮಧ್ಯದ ಅಂತರ್ಜಾಲ ವಿಶಾಲವಾಗಿರುವುದರಿಂದ ಕವಿಗೆ ಕೈಯಾಡಿಸಲು ಸಾಕಷ್ಟು Space ಸಿಕ್ಕಿದೆ. ರವಿ ಕಾಣದ್ದನ್ನೆಲ್ಲಾ ಕವಿ ಕಂಡಿದ್ದಾನೆ. ಹಾಗಾಗಿಯೆ, ಕೋರ್ಟಿಗೆ ಚಾಟಿ ಇಲ್ಲದ ಬುಗುರಿಯಂತೆ ಸುತ್ತುವ ಪಕ್ಷಗಾರರಿಂದ ಹಿಡಿದು ಸಾವಿನಂತಹ ಗೂಢ ಗಂಭೀರ ವಿಷಯಗಳೆಲ್ಲ ಇಲ್ಲಿ ಕವನಗಳಾಗಿವೆ.

"What do you consider yourself to be, basically? ಕವಿ ಎಂದೊ ವಕೀಲ ಎಂದೊ? ಎಂಬ ಪ್ರಶ್ನೆ ಅವರನ್ನು ಒಂದು ನಿಮಿಷ ಚಿಂತಿಸುವಂತೆ ಮಾಡಿತು "ನಾನು ಕವಿಯೂ ಹೌದು, ವಕೀಲನೂ ಹೌದು," ಎಂದರವರು ಚುಟುಕಾಗಿ. "ಕಾವ್ಯಮಯವಾಗಿ Pleading ಬರೆಯುವ ವಕೀಲರು ನೀವು" ಎನ್ನುತ್ತ ಮಾತು–ಕಥೆಗೆ ಬಂದು ಸೇರಿಕೊಂಡರು ಕೆ. ಸೂರ್ಯ ನಾರಾಯಣ ರಾಯರು.



ಚುಟುಕು ಉತ್ತರದಿಂದ ಯಾರಿಗೂ ಸಮಾಧಾನವಾದಂತೆ ಕಾಣಲಿಲ್ಲ ಹಾಗಾಗಿ ಅದೇ ಪ್ರಶ್ನೆಯನ್ನು ಇನ್ನೊಂದು ರೂಪದಲ್ಲಿ ಕೇಳಬೇಕಾಯಿತು. "ವಕೀಲ–ಪ್ರಕಾಶ್, ಕವಿ–ಪ್ರಕಾಶರ ಮೇಲೆ ಪ್ರಭಾವ ಬೀರಿದ್ದಾರೋ ಅಥವಾ Vice versa?" ಅದಕ್ಕವರು ಹೇಳಿದ್ದು ಹೀಗೆ

These two personalities are complimentary to each other. ನೋಡಿ, ಕವಿ ತನ್ನದೆ ಅನುಭವವನ್ನು ಕಾವ್ಯವಾಗಿಸಿದರೂ ಅದನ್ನು ಸಾಕ್ಷಿ ಪ್ರಜ್ಞೆಯಿಂದ ಬರೆಯಬೇಕು. ಆ ಅನುಭವಗಳನ್ನು ಮೈಮೇಲೆ ಎಳೆದುಕೊಂಡು ಅದರ ಭಾಗವಾಗಬಾರದು. ಅನುಭವದಿಂದ ದೂರ ನಿಂತು ಅದಕ್ಕೆ ಶಬ್ದದ ರೂಪ ಕೂಡ ಬೇಕು. ನನ್ನ ಅಭಿಪ್ರಾಯದಲ್ಲಿ ಹಾಗೆ ಮಾಡದವನು ಕವಿ ಆಗಲಾರ. ವಕೀಲನೂ ಹೀಗೆ ಅಲ್ಲವೆ? Client ಹೇಳುವ ತನ್ನ ನೋವಿನ, ಸಂಕಟದ ಕಥೆಯನ್ನು ವೈಯಕ್ತಿಕವಾಗಿ ತೆಗೆದುಕೊಳ್ಳಲು ಹೊರಟರೆ ವಕೀಲರಾಗಿ Practice ಮಾಡಲು ಸಾಧ್ಯವೆ? ಪಕ್ಷಗಾರನ ಕಥೆಯನ್ನು Dispassionately ಕೋರ್ಟಿನ ಮುಂದಿಟ್ಟಾಗಲೆ ಅಲ್ಲವೆ ಒಳ್ಳೆಯ ವಕೀಲರಾಗುವುದು?"

ಕಾವ್ಯ ಮೌನದಲ್ಲಿ ಅರಳುವ ಹೂವಿನಂತೆ. ಅಥವಾ ರಾತ್ರಿ ಸದ್ದಿಲ್ಲದೆ ಬೀಳುವ ಇಬ್ಬನಿಯಂತೆ ಎನ್ನಿ ಬೇಕಾದರೆ, ಸೆಮಿನಾರಿನ ಗೌಜಿ–ಗದ್ದಲದಲ್ಲಿ ಕಾವ್ಯ ಧೂಳಿಪಟವಾಗುತ್ತದೆ. ಸಂಕಲನದ ೪೪ ಕವನವೂ ಇದನ್ನೆ ಧ್ವನಿಸುತ್ತದೆ. "ಸೆಮಿನಾರಿನ ಗೌಜಿ–ಗದ್ದಲಕ್ಕಿಂತ ಗಡಿಬಿಡಿ–ಗೊಂದಲಗಳ ವಕೀಲವೃತ್ತಿಯಲ್ಲಿ ನಿಮ್ಮ ಕಾವ್ಯ ಅರಳುತ್ತಿರುವುದು ಹೇಗೆ?" ಎಂಬುದನ್ನು ಕೊನೆಯ ಪ್ರಶ್ನೆಯಾಗಿ ಕೇಳಿದೆ. certified copy ತಯಾರಾಗಿಲ್ಲ ಛೆ, ಹೋದವಾರವೇ post ಆಗಬೇಕಾದ petition ಇನ್ನೂ ಬಂದಿಲ್ಲ, ನಾಳೆ interin order extend ಮಾಡಿಸಬೇಕು, ಇಂತಹ daily dradgery ಗಳ ಜೊತೆಗೆ ಹೇಳಿದ್ದನ್ನೆ ಹೇಳಿ ತಲೆ ತಿನ್ನುವ ಪಕ್ಷಗಾರರು, ಕೇಳಿದ್ದನ್ನೆ ಕೇಳುವ 'ಸಂಶಯಾತ್ಮಾ' ನ್ಯಾಯಾಧೀಶರು ಇವುಗಳ ಮಧ್ಯೆ ಕಾವ್ಯ ಅರಳಲು ಸಾಧ್ಯವೆ? ಈ ಸಂಶಯ ನನ್ನ ತಲೆಯಲ್ಲಿತ್ತು.

ಗುಟ್ಟು ಬಿಟ್ಟು ಕೊಡದೆ ಸುಮ್ಮನೆ ನಕ್ಕರವರು.


☆

## ಅಂದು Supreme Court goes to High Court
## ಇಂದು Supreme Court goes to Supreme Court

ಅಂದು ನ್ಯಾಯಾಧೀಶರ ಆಸ್ತಿಪಾಸ್ತಿ ವಿವರಗಳ ಬಹಿರಂಗಕ್ಕೆ ಸಂಬಂಧಿಸಿದ ಕೇಂದ್ರೀಯ ಮಾಹಿತಿ ಕಮಿಷನ್ನಿನ ಆಜ್ಞೆಯನ್ನು ಸರ್ವೋಚ್ಚ ನ್ಯಾಯಾಲಯುದ ರೆಜಿಸ್ಟ್ರಿ ದೆಹಲಿ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ನಮ್ಮ ಸಹೋದರ ಪತ್ರಿಕೆ Communique ಸೇರಿದಂತೆ ಹಲವು ಇಂಗ್ಲೀಷ್ ಪತ್ರಿಕೆಗಳು ಈ ಸುದ್ದಿಯನ್ನು Supreme Court goes to High Court ಎಂಬ ಶೀರ್ಷಿಕೆಯಡಿ ವರದಿ ಮಾಡಿದ್ದವು.

ಈಗ ಇದೇ ಕಮಿಷನ್ನಿನ ಮಾಹಿತಿ ಬಹಿರಂಗಕ್ಕೆ ಸಂಬಂಧಿಸಿದ ಇನ್ನೊಂದು ಆಜ್ಞೆಯನ್ನು ಸರ್ವೋಚ್ಚ ನ್ಯಾಯಾಲಯ ತನ್ನ ಮುಂದೆ ಪ್ರಶ್ನಿಸಿಕೊಂಡಿದೆ. ಹಾಗಾಗಿ ಇಂದು Supreme Court goes to Supreme Court!

ಹಲವಾರು ಹಿರಿಯ ನ್ಯಾಯಮೂರ್ತಿಗಳ ಸೇವಾ ಹಿರಿತನವನ್ನು ಕಡೆಗಣಿಸಿ ಆಯ್ದ ಮೂವರಿಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಪದೋನ್ನತಿ ಕೊಟ್ಟಿರುವ ತೀರ್ಮಾನದ ಹಿಂದಿರುವ ಕಾರಣಗಳನ್ನು ತಿಳಿಸುವಂತೆ ಸರ್ವೋಚ್ಚ ನ್ಯಾಯಾಲಯಕ್ಕೆ ನಿರ್ದೇಶನ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಪುರಸ್ಕರಿಸಿದ ಮಾಹಿತಿ ಕಮಿಷನ್ ಈ ಕಾರಣಗಳನ್ನು ಬಹಿರಂಗಗೊಳಿಸುವಂತೆ ಸ. ನ್ಯಾಯಾಲಯಕ್ಕೆ ನಿರ್ದೇಶನ ನೀಡಿತ್ತು. ಈ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯದ ರೆಜಿಸ್ಟ್ರಿ ಪ್ರಶ್ನಿಸಿದೆ. ಈಗ ಈ ವಿಷಯ ಸರ್ವೋಚ್ಚ ನ್ಯಾಯಾಲಯುದ ಮುಂದಿದೆ. ನ್ಯಾಯಾಲಯ, ಇಂತಹ ಮಾಹಿತಿಯನ್ನು ಮಾಹಿತಿ ಹಕ್ಕಿನ ಕಾಯ್ದೆಯಡಿ ಬಹಿರಂಗ ಪಡಿಸಬೇಕಿಲ್ಲವೆಂದರೆ ಕಾನೂನನ್ನು ತಿದ್ದುಪಡಿ ಮಾಡಬೇಕಾಗಿ ಬರಬಹುದು.



ವಕೀಲರ ದಿನಾಚರಣೆಯ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷರಿಗೆ ಧ್ವಜ ತೊಡಿಸುತ್ತಿರುವ ಲಹರಿ ಸಂಸ್ಥಾಪಕ, ಕೆ. ಸೂರ್ಯನಾರಾಯಣರಾವ್, ಸಂಘದ ಪದಾಧಿಕಾರಿ ಜಿ. ಟಿ. ರವಿ ಚಿತ್ರದಲ್ಲಿದ್ದಾರೆ.

### ಹಾಗೆ ಸುಮ್ಮನೆ...

೨೦೧೦ರ ಫೆಬ್ರುವರಿ ತಿಂಗಳ ವಿಶೇಷವೇನು ಗೊತ್ತೆ? ಆ ತಿಂಗಳಲ್ಲಿ ೪ ಸೋಮವಾರ, ೪ ಮಂಗಳವಾರ, ೪ ಬುಧವಾರ, ೪ ಗುರುವಾರ, ೪ ಶುಕ್ರವಾರ, ೪ ಶನಿವಾರ ಮತ್ತು ೪ ಆದಿತ್ಯವಾರಗಳು ಬಂದಿವೆ. ಹೀಗಾಗುವುದು ೧೧ ವರ್ಷಗಳಿಗೆ ಒಂದು ಸಾರಿ ಮಾತ್ರವಂತೆ. ನಿಮ್ಮ ಫೋನಿನಲ್ಲಿರುವ ಕ್ಯಾಲೆಂಡರ್‌ನಲ್ಲಿ ನೋಡಿ 'ಇದು ಹೌದೆ?' ಎಂದು ಹೇಳುತ್ತೀರಾ?

ಲಹರಿ ಪುಸ್ತಕ ಭಂಡಾರಕ್ಕೆ ಪುಸ್ತಕವನ್ನು ಕಾಣಿಕೆಯಾಗಿ ಕೊಡಲಿಚ್ಛಿಸಿದ್ದೀರಾ? ಭಂಡಾರದಿಂದ ಪುಸ್ತಕ ಎರವಲು ಪಡೆಯಬೇಕಾಗಿದೆಯೆ?
ಸಂಪರ್ಕಿಸಿ: ನಾಗೂರ್ ರೋಜಾ, ನಿರ್ದೇಶಕಿ ಲಹರಿ ಪುಸ್ತಕ ಭಂಡಾರ, ಮೊಬೈಲ್ ನಂ. ೯೩೪೧೯೬ ೨೯೦೦

ಪ್ರಕಾಶಕರು : ಲಹರಿ ವಕೀಲರ ವೇದಿಕೆ, ನಂ. ೨೯೮೦, 'ಲಕ್ಷ್ಮೀದೀಪ', ೧೭ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು–೫೬೦ ೦೭೦
ಮುದ್ರಣ : ವೀ ಕೇ ಪ್ರಿಂಟರ್ಸ್ & ಪಬ್ಲಿಷರ್ಸ್, ನಂ. ೩೪೬, ಊಳಿಗಾ ಕಾಂಪ್ಲೆಕ್ಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦ ೦೦೩ ಸಂಪಾದಕರು : ಜಿ.ಎಸ್.ನಟರಾಜನ್